ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 4    ಸಂಚಿಕೆ : 11    ಆಗಸ್ಟ್ –2009    ಪುಟಗಳು : 8    ಬೆಲೆ : 5–00

# ಕರ್ತವ್ಯ ಪಾಲನೆಯಿಂದ ದೇಶ ಸುಭಿಕ್ಷ

–ಶ್ರೀ ಪ್ರಕಾಶ ಕಾಮತ್

## ಅಜಿತ ಮನೋಚೇತನದ 'ವಿಕಾಸ ವಿಶೇಷ ಶಾಲೆ' ಕಟ್ಟಡದ ಉದ್ಘಾಟನೆ

**ಶಿರಸಿ:** ಒಳ್ಳೆಯ ಕೆಲಸ ಮಾಡಬೇಕು ಎಂಬುದು ಧರ್ಮದ ಸಾರ. ಎಲ್ಲರೂ ತಮ್ಮ ತಮ್ಮ ಕರ್ತವ್ಯ ಸರಿಯಾಗಿ ಮಾಡಿದಾಗ ದೇಶ ಸುಭಿಕ್ಷವಾಗುತ್ತದೆ ಎಂದು ಅಖಿಲ ಭಾರತೀಯ ವನವಾಸಿ ಕಲ್ಯಾಣ ಸಂಸ್ಥೆಯ ರಾಂಚಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಪ್ರಕಾಶ ಕಾಮತ್ ಹೇಳಿದರು.

ಇಲ್ಲಿಯ ಅಜಿತ ಮನೋಚೇತನ ಸಂಸ್ಥೆಯು ಮಲೆನಾಡು ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ನಿರ್ಮಿಸಿದ ವಿಕಾಸ ವಿಶೇಷ ಶಾಲಾ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದು ದೇಶದಲ್ಲಿ ವೈಚಾರಿಕ ಸಂಘರ್ಷ ಪ್ರಾರಂಭವಾಗಿದೆ. ಇಂಥ ಸಂದರ್ಭದಲ್ಲಿ ಪ್ರಾಚೀನ ಸಾಧುಸಂತರು, ಋಷಿಮುನಿಗಳ ಆದರ್ಶ ನಮ್ಮದಾಗಲಿ ಎಂದರು. ಪ್ರತಿಷ್ಠಾನದ ಕರೆಗೆ ಓಗೊಟ್ಟು ಹೆಚ್ಚಿನ ಸೇವಾವ್ರತಿಗಳು ಜನಸೇವೆಗೆ ಮುಂದಾದ ಈ ಜಿಲ್ಲೆಯಲ್ಲಿ ಸೇವಾಕಾರ್ಯ ಪ್ರಾರಂಭಿಸಬೇಕು ಎಂದು ನಿಶ್ಚಯಿಸಿ ಅಜಿತ ಮನೋಚೇತನ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಸಂಸ್ಥೆಯ ಮೂಲಕ ನಂತರ ಅಕ್ಷಮ ವ್ಯಕ್ತಿಗಳನ್ನು ಸಕ್ಷಮವಾಗಿಸುವ ನಿಟ್ಟಿನಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ ನೀಡಲು ವಿಕಾಸ ಶಾಲೆಯನ್ನು ಪ್ರಾರಂಭಿಸಿದ್ದೇವೆ. ಇಂಥ ಮಕ್ಕಳಿಗೆ ಶಿಕ್ಷಣ ನೀಡುವದು ದೇವತಾ ಕಾರ್ಯ ಮಾಡಿದಷ್ಟೇ ಅಮೂಲ್ಯವಾದದ್ದು ಎಂದರು.

ಎಲ್‌ಐಸಿ ಶಾಖಾ ಪ್ರಧಾನ ವ್ಯವಸ್ಥಾಪಕ ಶ್ರೀ ಬಿ. ಪದ್ಮನಾಭರಾವ್ ಮಾತನಾಡಿ, ಸಮಾಜದ ಋಣವನ್ನು ತೀರಿಸುವ ಸೇವಾ ಕಾರ್ಯ ಶ್ಲಾಘನೀಯವಾಗಿದೆ. ಜೀವನ್ ಆಧಾರ ಎಂಬ ಪಾಲಿಸಿಯನ್ನು ಬುದ್ಧಿಮಾಂದ್ಯತೆಯುಳ್ಳ ಮಕ್ಕಳ ಭವಿಷ್ಯಕ್ಕೆ ಅನುಕೂಲವಾಗುವಂತೆ ರೂಪಿಸಲಾಗಿದೆ. ಪಾಲಕರು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಎಲ್‌ಐಸಿ ಗೋಲ್ಡನ್ ಜ್ಯುಬಿಲಿ ಫಂಡ್‌ನಿಂದ ಅಜಿತ ಮನೋಚೇತನ ಸಂಸ್ಥೆಗೆ ನೆರವು ಕೊಡಿಸುವ ಪ್ರಯತ್ನ ಮಾಡುವುದಾಗಿ ಹೇಳಿದರು. ಕಟ್ಟಡ ನಿರ್ಮಾಣಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಅನುದಾನ ಕೊಡಿಸಿದ್ದ ಮಾಜಿ ಶಾಸಕ ಶ್ರೀ ವಿವೇಕಾನಂದ ವೈದ್ಯ ಮಾತನಾಡಿ, ಸಂಸ್ಥೆಯ ಅಭಿವೃದ್ಧಿಗೆ ಬೇರೆ ಮೂಲಗಳಿಂದ ನೆರವು ಕೊಡಿಸುವುದಾಗಿ ಹೇಳಿದರು.

ಶಾಲೆಗೆ ತಾಪಂ ವತಿಯಿಂದ 50 ಸಾವಿರ ರೂಪಾಯಿಗಳನ್ನು ಕೊಡಿಸುವುದಾಗಿ ಅಧ್ಯಕ್ಷ ಶ್ರೀ ಸದಾನಂದ ಭಟ್ಟ ಹೇಳಿದರು. ನಗರಸಭಾಧ್ಯಕ್ಷ ಶ್ರೀ ರಮೇಶ ಆಚಾರಿ ಮಾತನಾಡಿ, ಟ್ರಸ್ಟ್‌ನಿಂದ ನಡೆಸುವ ಆರೋಗ್ಯ ತಪಾಸಣಾ ಶಿಬಿರಕ್ಕೆ ನಗರಸಭೆಯಿಂದ ಅನುದಾನ ಕೊಡಿಸುವುದಾಗಿ ಹೇಳಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಪಿ.ಎಸ್. ಹೆಗಡೆ ಹೀಪನಳ್ಳಿ ಟ್ರಸ್ಟಿಗಳಾದ ಸರ್ವಶ್ರೀ ವಿ.ಆರ್. ಹೆಗಡೆ, ಡಾ. ಜಿ.ಎಂ. ಹೆಗಡೆ, ಪ್ರೊ. ರವಿ ನಾಯಕ, ಸುಧೀರ ಭಟ್ಟ ಮತ್ತು ಶ್ರೀಮತಿ ವಾಸಂತಿ ಹೆಗಡೆ ಉಪಸ್ಥಿತರಿದ್ದರು. ಕಾರ್ಯದರ್ಶಿ ಶ್ರೀ ಅನಂತ ಹೆಗಡೆ ಅಶೀಸರ ಸ್ವಾಗತಿಸಿದರು. ಶ್ರೀಮತಿ ಜ್ಯೋತಿ ಭಟ್ಟ ನಿರೂಪಿಸಿದರು. ಅಧ್ಯಕ್ಷ ಶ್ರೀ ಉದಯ ಸ್ವಾದಿ ವಂದಿಸಿದರು. ನಂತರ ಡಾ. ಎಸ್.ಸಿ. ಕುಲಕರ್ಣಿ ಮಾನಸಿಕ ರೋಗಿಗಳ ಉಚಿತ ಆರೋಗ್ಯ ತಪಾಸಣೆ ನಡೆಸಿದರು.




**ಚಿತ್ರದಲ್ಲಿ: ಮಾತನಾಡುತ್ತಿರುವವರು ಶ್ರೀ ಪ್ರಕಾಶ್ ಕಾಮತ್.**
**ಕುಳಿತಿರುವವರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ಅನಂತ ಹೆಗಡೆ ಆಶೀಸರ ಮೊದಲಾದ ಗಣ್ಯರು.**

# ಮಕ್ಕಳ ಮಾರ್ಗದರ್ಶಿ ಕೇಂದ್ರದ ತರಬೇತಿ ಕಾರ್ಯಕ್ರಮದ ಸಮಾರೋಪ

ಪ್ರಸನ್ನ ಆಪ್ತಸಲಹಾ ಕೇಂದ್ರದಲ್ಲಿ ಮಕ್ಕಳ ಆಪ್ತಸಲಹೆಗಾರರ ವಾರ್ಷಿಕ ತರಬೇತಿ ಕಾರ್ಯಾಗಾರ ಇತ್ತೀಚೆಗೆ ನಡೆಯಿತು. ಜೂನ್ 27ರ ಶನಿವಾರದಂದು ಪ್ರಾರಂಭವಾದ ಈ ಕಾರ್ಯಕ್ರಮ ಅನಂತರದ 5 ಶನಿವಾರಗಳಂದು ಅಪರಾಹ್ನ 2 ಗಂಟೆಯಿಂದ 4.30ರವರೆಗೆ ನಡೆಯಿತು. ಈ ಕಾರ್ಯಾಗಾರದಲ್ಲಿ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಷಯಗಳ ಬಗ್ಗೆ ತಜ್ಞರಿಂದ ಉಪನ್ಯಾಸಗಳೂ ಅವರೊಂದಿಗೆ ವಿಚಾರವಿನಿಮಯಗಳೂ ನಡೆದವು. ಈ ತರಬೇತಿ ಕಾರ್ಯಾಗಾರದ ಸಮಾರೋಪ ಕಾರ್ಯಕ್ರಮವನ್ನು ಆಗಸ್ಟ್ 1ರಂದು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಶ್ರೀಧರ ಸಾಗರ್ ಹಾಗೂ ಶ್ರೀ ಕೃಷ್ಣಮೂರ್ತಿಯವರು ಸಮಾಜಸೇವೆಗಾಗಿ ಹೆಚ್ಚು ಹೆಚ್ಚು ಜನರು ಹೆಚ್ಚು ಹೆಚ್ಚು ಸಮಯವನ್ನು ಕೊಡಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಅಲ್ಲದೇ, ಮಕ್ಕಳ ಮಾನಸಿಕ ಆರೋಗ್ಯದಲ್ಲಿ ಆಪ್ತಸಲಹೆಗಾರರ ಜವಾಬ್ದಾರಿಯ ಮಹತ್ತ್ವದ ಬಗ್ಗೆ ಮಾತನಾಡಿದರು.

ಈ ಕಾರ್ಯಕ್ರಮದ ಬಗ್ಗೆ ತಮ್ಮ ಅನುಭವವನ್ನು ಮೂವರು ಶಿಕ್ಷಾರ್ಥಿಗಳು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ತುಂಬಾ ಉಪಯುಕ್ತ ಮಾಹಿತಿಗಳು ಸಿಕ್ಕವೆಂದು ಅವರು ಹೇಳಿದರು. ತಮ್ಮ ಬಾಲ್ಯವನ್ನು ನೆನಪಿಸಿಕೊಂಡದ್ದಲ್ಲದೇ, ಮಕ್ಕಳ ಮನಸ್ಸನ್ನು ತಿಳಿಯಲು ಇಲ್ಲಿನ ತರಬೇತಿ ಸಹಾಯಕಾರಿಯೆಂದು ಅವರು ಅಭಿಪ್ರಾಯಪಟ್ಟರು. ಅಲ್ಲದೇ, ತಮ್ಮ ಊರಿನಲ್ಲೂ ಇಂತಹುದೇ ತರಬೇತಿ ಕಾರ್ಯಕ್ರಮವನ್ನು ತಾವು ಆಯೋಜಿಸುವುದಾಗಿ ಕೆಲವರು ಹೇಳಿದರು. ಪ್ರತೀ ಶಾಲೆಗಳಲ್ಲಿ ಇಂತಹ ತರಬೇತಿ ಕಾರ್ಯಕ್ರಮಗಳು ನಡೆದರೆ ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರು ತುಂಬಾ ಪರಿಣಾಮಕಾರಿಯಾದ ಪಾತ್ರವಹಿಸಲು ಸಹಕಾರಿಯೆಂಬುದು ಹೆಚ್ಚಿನೆಲ್ಲರ ಮತವಾಗಿತ್ತು. ವಿಶೇಷವೆಂದರೆ, ಕಳೆದ ಒಂದು ವರ್ಷದ ಅವಧಿಯಲ್ಲಿ ಮಕ್ಕಳ ಮಾರ್ಗದರ್ಶಿ ಕೇಂದ್ರದಲ್ಲಿನ ತಮ್ಮ ಅನುಭವವನ್ನು ಒಬ್ಬರು ಕವನ ರೂಪದಲ್ಲಿ ವ್ಯಕ್ತಪಡಿಸಿದ್ದು! ಹೆಚ್ಚು ಜನರು ಮಕ್ಕಳ ಮಾರ್ಗದರ್ಶಿ ಕೇಂದ್ರದೊಂದಿಗೆ ಜೋಡಿಸಿಕೊಳ್ಳಬೇಕೆಂದು ಅವರು ತಮ್ಮ ಕವನದ ಮೂಲಕ ಕರೆ ನೀಡಿದರು. ಈ ಕರೆಗೆ ತಕ್ಷಣವೇ ಸ್ಪಂದಿಸಿದ ಕೆಲವರು ಇದರಲ್ಲಿ ಆಸಕ್ತಿ ವ್ಯಕ್ತಪಡಿಸಿ ಮುಂದಿನ ಹಂತದ ತರಬೇತಿಯಲ್ಲಿ ತಾವು ಪಾಲ್ಗೊಳ್ಳುವುದಾಗಿ ತಿಳಿಸಿದರು. ಒಟ್ಟಿನಲ್ಲಿ ಇದೊಂದು ಪರಿಣಾಮಕಾರಿಯಾದ ಕಾರ್ಯಕ್ರಮವೆಂದು ಪಾಲ್ಗೊಂಡವರ ಒಮ್ಮತವಾಗಿತ್ತು.

**ತರಬೇತಿ ಕಾರ್ಯಾಗಾರದಲ್ಲಿ ನಡೆದ**
**ಉಪನ್ಯಾಸ-ಸಂವಾದಗಳು**

| | |
|---|---|
| ಮಕ್ಕಳ ಬೆಳವಣಿಗೆ ಮತ್ತು ಮಾನಸಿಕ ಆರೋಗ್ಯ | - ಡಾ. ಮಾಲವಿಕಾ ಕಪೂರ್ |
| ಮಾನಸಿಕ-ಭಾವನಾತ್ಮಕ ಅಸಮತೋಲನ | - ಡಾ. ಉಮಾ ಹಿರೀಸಾವೆ |
| ಅತಿಯಾದ ಚಟುವಟಿಕೆ ಮತ್ತು ನಡತೆಯಲ್ಲಿನ ಅಸಹಜತೆ | - ಶ್ರೀಮತಿ ಗೀತಾ |
| ಕಲಿಕೆಯಲ್ಲಿನ ಸಮಸ್ಯೆಗಳು | - ಶ್ರೀಮತಿ ಅಖಿಲಾ ಸದಾಶಿವ |
| ಹದಿಹರೆಯದ ಸಮಸ್ಯೆಗಳು | - ಡಾ. ಪೂರ್ಣಿಮಾ ಭೋಲ |

# ನೀವು ಬರೆದಂತೆ............

ಈ ಪ್ರಪಂಚದಲ್ಲಿ ಹಣ ಒಡವೆ ಅಥವಾ ಯಾರೋ ಕೊಟ್ಟಿರುವ ಪ್ರಿಯವಾದ ವಸ್ತು ಶಾಶ್ವತವಲ್ಲ. ಆದರೆ ಪ್ರತಿಷ್ಠಾನದಲ್ಲಿ ಕೊಟ್ಟ ಶಿಕ್ಷಣ ಮಾತ್ರ ಕೊನೆಯವರೆಗೂ ಜೀವಂತವಾಗಿರುವ ಶಿಕ್ಷಣ. ಇದಕ್ಕೆ ಉದಾಹರಣೆಯೆಂದರೆ ಜುಲೈ ತಿಂಗಳ ಸೇವಾದಿಶಾದಲ್ಲಿ ಪ್ರಕಟವಾಗಿರುವ ಸ್ವಸಹಾಯ ಸಂಘದ ಅನುಭವ. ಪ್ರತಿಷ್ಠಾನದ ಶಿಕ್ಷಣ ಪಡೆದ ಭಗಿನಿ ಅಲ್ಲಿರುವ ಮಾತೆಯರಲ್ಲಿ ತಂದ ಬದಲಾವಣೆ, ನಿಜಕ್ಕೂ ಮೆಚ್ಚುವಂಥದ್ದೇ.

'ಸೇವಾದಿಶಾ'ದಲ್ಲಿ ಪೂರ್ವಸೇವಾವ್ರತಿ ದಂಪತಿಗಳಿಗೆ ಕೊಟ್ಟ ಕರೆ ಚೆನ್ನಾಗಿತ್ತು. ಪೂರ್ವಸೇವಾವ್ರತಿ ದಂಪತಿಗಳು ಪ್ರತಿಷ್ಠಾನದ ಸೇವಾಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಒಂದು ಅವಕಾಶ ಕೊಟ್ಟಂತಾಯಿತು. ಸೇವಾವ್ರತಿಗಳ ಅಭಿಯಾನದ ಬಗ್ಗೆ ಓದಿದ ನಮಗೆಲ್ಲಾ ಪ್ರೇರಣೆ ನೀಡಿದಂತಾಗಿದೆ.

**ನಳಿನಾ, ಅಕ್ಷರಂ, ಬೆಂಗಳೂರು**

'ಸೇವಾದಿಶಾ'ದ ನಿಯಮಿತ ಓದುಗರಲ್ಲಿ ನಾನೂ ಒಬ್ಬಳು. ಇದರಿಂದಾಗಿ ಕರ್ನಾಟಕದಾದ್ಯಂತ ಪ್ರತಿಷ್ಠಾನದಿಂದ ನಡೆಯುವ ಕಾರ್ಯಕ್ರಮಗಳು ನಮ್ಮ ಅರಿವಿಗೆ ಬರುತ್ತದೆ ಮತ್ತು ಕಾರ್ಯಕ್ರಮದಲ್ಲಿ ವೈವಿಧ್ಯತೆ ಕೂಡಾ ಇರುತ್ತದೆ. ಸೇವಾಕಾರ್ಯದಲ್ಲಿ ತೊಡಗಿರುವ ನಮಗೆ ಹೊಸಹೊಸ ಕಲ್ಪನೆಗಳು ನಮ್ಮಲ್ಲಿ ಮೂಡುತ್ತದೆ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಸ್ವಸಹಾಯ ಸಂಘಗಳ ಮೂಲಕ ಕನ್ಯಾಕುಮಾರಿಯಲ್ಲಿ ಆದ ಪರಿವರ್ತನೆಯ ಬಗ್ಗೆ ಓದಿ ಮನಸ್ಸು ಪುಳಕಗೊಂಡಿತು. ಸಾಮಾನ್ಯ ಜನರು, ಶ್ರಮಿಕರು ಉಳಿತಾಯ ಮಾಡಿದ ಹಣದಲ್ಲಿ ಪರಿಚಿತರಿಗೆ ಕಷ್ಟನಷ್ಟಗಳು ಉಂಟಾದಾಗ ಪರಸ್ಪರ ಸ್ಪಂದಿಸುವುದನ್ನು ನೋಡಿ ನಮಗೂ ಇದೊಂದು ಮೇಲ್ಪಂಕ್ತಿಯೆನಿಸಿದೆ.

ಕಳೆದ ಸಂಚಿಕೆಯಲ್ಲಿ ಎಂಟೇಪುಟಗಳಲ್ಲಿ ಸಾಕಷ್ಟು ಮಾಹಿತಿಯನ್ನು 'ಸೇವಾದಿಶಾ' ಒದಗಿಸಿದೆ. ಇದೇ ರೀತಿ 'ಸೇವಾದಿಶಾ' ಮೂಡಿ ಬರಲಿ. ಮುಖಪುಟ ಕೆಂಪು ಬದಲು ನೀಲಿಯೇ ಇದ್ದರೆ ಅಂದವಾಗಿರುತ್ತದೆ ಎಂದು ನನ್ನ ಭಾವನೆ.

**ಪ್ರತಿಮಾ, ತಟ್ಟಿಕೈ**

ಪ್ರತಿ ತಿಂಗಳು ಬರುವ 'ಸೇವಾದಿಶಾ' ನನಗೀಗ ಜೀವನ ದಿಶೆ. ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ತಮ್ಮ ತವರಿನವರ ಹಾದಿ ಕಾಯುತ್ತಾರೆ. ಆದರೆ 5 ವರ್ಷ ಪ್ರತಿಷ್ಠಾನದ ಸೇವಾವ್ರತಿಯಾದ ನನಗೆ ಪ್ರತಿಷ್ಠಾನದ ಅಕ್ಷರ, ಮಾತು, ವಿವಿಧ ಕಾರ್ಯಕ್ರಮ, ಪರಿವರ್ತನೆ - ಇವೆಲ್ಲದರ ಆಗರವಾದ 'ಸೇವಾದಿಶಾ' ತಲುಪಿದಾಗ ಓದಲು ಎಲ್ಲಿಲ್ಲದ ಕಾತರ, ಸಂತೋಷ.

**ಶೋಭಾ, ಕೆಂಬಾವಿ**

ಪಾಶ್ಚಾತ್ಯ ದೇಶಗಳ ಆರ್ಥಿಕ ಬಿಕ್ಕಟ್ಟು ನಿಜಕ್ಕೂ ವಿಶ್ವವನ್ನೇ ಅಲ್ಲಾಡಿಸಿದೆ. ಅದರ ಪರಿಣಾಮ ಭಾರತೀಯರ ಮೇಲೂ ಸ್ವಲ್ಪ ಮಟ್ಟಿಗೆ ಆಗಿದೆ. ಸರಳ ಜೀವನ ಪ್ರತಿಯೊಬ್ಬರಿಗೂ, ಹಿತಕರ ಎಂಬ ವಿಚಾರ ಅತ್ಯಂತ ಸಮಂಜಸವಾದುದು.

ದೇವರು ಎಲ್ಲರಿಗೂ ಸುಖಶಾಂತಿ ನೀಡಲಿ. ಈ ಸಂದೇಶ ಹೆಚ್ಚು ಜನರಿಗೆ ತಲುಪಲಿ ಎಂದು ಹಾರೈಸುವೆ.

**ಶಿವವೀರ ಬಂಡಿ, ಗುಲ್ಬರ್ಗಾ**

ಬಾಂಧವ್ಯದ ಗುರುತಾದ ರಕ್ಷಾಬಂಧನದ ವಿಶೇಷ ಮಹತ್ವವನ್ನು ಇಂದಿನ ಆರ್ಥಿಕ - ಸಾಮಾಜಿಕ ಹಿನ್ನೆಲೆಯಲ್ಲಿ, ಮನ ಮುಟ್ಟುವ ಹಾಗೆ ರಕ್ಷಾಬಂಧನದ ಸಂದೇಶದಲ್ಲಿ ಎತ್ತಿ ತೋರಿಸಿದ್ದೀರಿ.

ಗ್ರಾಮಸೇವೆಯೇ ರಾಮಸೇವೆ. ಕೃಷಿಸಂಪತ್ತು - ಗೋ ಸಂಪತ್ತು ಭಾರತೀಯ ಆಧ್ಯಾತ್ಮ ಹಾಗೂ ಸಂಸ್ಕೃತಿಯ ಉಳಿವಿಗೆ ಮತ್ತು ಮುನ್ನಡೆಗೆ ಅತ್ಯಗತ್ಯ. ಇವುಗಳ ರಕ್ಷಣೆ, ಪೋಷಣೆಗೆ ನಾವೆಲ್ಲರೂ ಕಂಕಣ ತೊಟ್ಟು, ನೀವು ಕಳಿಸಿರುವ ರಕ್ಷಾ ಸೂತ್ರವನ್ನು ಹರ್ಷೋತ್ಸಾಹದಿಂದ ಧರಿಸಿ ನಿಮಗೆ ಶುಭ ಹಾರೈಸುತ್ತ ಧನ್ಯವಾದ ಸಲ್ಲಿಸುತ್ತಿದ್ದೇನೆ.

**ಪ್ರಭುಪ್ರಸಾದ್, ಮೈಸೂರು**

## ನಿರ್ದೇಶಕರ ನುಡಿ

# ಸಂಗೀತ ಸಂಜೀವಿನಿಯಾದಾಗ

5 ವರ್ಷದ ಹುಡುಗಿ ಅಡುಗೆ ಮನೆಯಲ್ಲಿ ಊಟ ಮಾಡುವಾಗ ಹೆಗ್ಗಣವೊಂದು ಅಟ್ಟದ ಮೇಲಿದ್ದ ತಂಬಿಗೆಯನ್ನು ತಲೆಯ ಮೇಲೆ ಬೀಳಿಸಿತು. ಎಚ್ಚರ ತಪ್ಪಿ ಬಿದ್ದು ಮೂಗಿನಿಂದ ಧಾರಾಕಾರ ರಕ್ತಸ್ರಾವವಾಗಿ ಬಟ್ಟೆಯೆಲ್ಲ ರಕ್ತದಿಂದ ಒದ್ದೆಯಾಯಿತು. ಕೂಡಲೇ ನೆಲಮಂಗಲದಿಂದ ಸುಮಾರು 25 ಕಿ.ಮೀ. ದೂರದ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಗೆ ಸೇರಿಸಲಾಯಿತು. ವೈದ್ಯರು 48 ಗಂಟೆಗಳ ಕಾಲಾವಕಾಶ ನೀಡಿದರು. ಅಷ್ಟರೊಳಗೆ ಎಚ್ಚರವಾದರೆ ಸರಿ ಇಲ್ಲವಾದರೆ ಬದುಕುವ ಆಸೆ ಬಿಡಿ ಎಂದರು. ಮನೆಮಂದಿಯೆಲ್ಲಾ ಪ್ರತಿಕ್ಷಣವನ್ನು ಯುಗದಂತೆ ಕಳೆದರು. 48 ಗಂಟೆಯೂ ಆಯಿತು. ಎಚ್ಚರವಾಗಲಿಲ್ಲ, ಇನ್ನು ಬದುಕುವ ಸಾಧ್ಯತೆ ಇಲ್ಲ, ಮನೆಗೆ ಕರೆದೊಯ್ಯಬಹುದೆಂದು ವೈದ್ಯರು ಸಲಹೆ ಮಾಡಿದರು. ಹುಡುಗಿಯ ತಂದೆ ಎಂ.ಎಸ್.ಸುಬ್ಬುಲಕ್ಷ್ಮಿಯವರ ಸಂಗೀತದ ಆರಾಧಕರು. ಬೆಂಗಳೂರಿನ ಗಾಯನ ಸಮಾಜದಲ್ಲಿ ಅವರು ನೀಡಿದ ಕಾರ್ಯಕ್ರಮದ ಸಂಗೀತವನ್ನು ಪೂರ್ಣವಾಗಿ ಧ್ವನಿ ಮುದ್ರಿಸಿಕೊಂಡಿದ್ದರು. ಈ ಚಿಕ್ಕ ಹುಡುಗಿಗೆ ಸುಬ್ಬುಲಕ್ಷ್ಮಿಯವರು ಹಾಡಿದ ಹಿಂದೋಳ ರಾಗದ 'ಭಜರೇ ಗೋಪಾಲಂ' ಬಹಳ ಇಷ್ಟವಾಗಿದ್ದು ಅದನ್ನು ಆ ಚಿಕ್ಕ ವಯಸ್ಸಿನಲ್ಲಿಯೇ ಸುಶ್ರಾವ್ಯವಾಗಿ ಹಾಡುವ ಅಭ್ಯಾಸ ಕೂಡ ಮಾಡಿಕೊಂಡಿದ್ದಳು. ಇದನ್ನು ತಿಳಿದಿದ್ದ ತಂದೆ ಕೂಡಲೇ ಮನೆಗೆ ಹೋಗಿ ಆ ಹಾಡಿನ ಧ್ವನಿಸುರುಳಿಯನ್ನು ತಂದು ಈ ಹುಡುಗಿಯ ಕಿವಿ ಹತ್ತಿರವಿಟ್ಟು 'ಭಜರೇ ಗೋಪಾಲಂ' ಕೇಳಿಸುತ್ತ, ದೇವರ ಮೇಲೆ ಭಾರ ಹಾಕಿ ಯಾವುದೋ ಒಂದು ದೂರದ ಆಸೆಯಿಂದ ಕುಳಿತಿದ್ದರು. ದೇವರ ಲೀಲೆ! ಸುಬ್ಬುಲಕ್ಷ್ಮಿಯವರ ಧ್ವನಿಯ ಆ ಹಾಡಿನ ಪ್ರಭಾವ ಪವಾಡವನ್ನೇ ಮಾಡಿತು. ಈಕೆ ಅದೇ ಹಾಡನ್ನು ಹಾಡುತ್ತಾ, ಕೈಕಾಲಾಡಿಸುತ್ತ ಎದ್ದು ಕುಳಿತಳು!!

ಪ್ರತಿಷ್ಠಾನದಲ್ಲಿ ಸೇವಾವ್ರತಿಯಾಗಿ ಸೇವೆ ಸಲ್ಲಿಸಿದ ಈಗ ಬೆಂಗಳೂರಿನ ಸುದರ್ಶನ ವಿದ್ಯಾಲಯದಲ್ಲಿ ಶಿಕ್ಷಕಿಯಾಗಿರುವ ಸೋದರಿ ಧನ್ಯತಾಳ ಜೀವನದ ಘಟನೆ ಇದು. ಎಫ್.ಎಂ.ನಲ್ಲಿ ಉದ್ಘೋಷಕಳಾಗಿರುವ (ಕ್ಯಾಸುವಲ್ ಅನೌನ್ಸರ್) ಈಕೆಯ ಧ್ವನಿಯನ್ನು ಆಗಾಗ್ಗೆ ನಾವು ಕೇಳಬಹುದು. ಈ ಪವಾಡದ ಬಗ್ಗೆ ಸುಬ್ಬುಲಕ್ಷ್ಮಿಯವರಿಗೆ ಪತ್ರ ಬರೆದು ತಿಳಿಸಿದಾಗ ಅವರ ಪತಿ ಶ್ರೀ ಸದಾಶಿವಂ ಉತ್ತರ ಬರೆದ ಪತ್ರ ಈಗಲೂ ಧನ್ಯತಾಳ ಹತ್ತಿರವಿದೆ. ನಂತರ 2ನೇ ತರಗತಿಯಲ್ಲಿದ್ದಾಗ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಬೆಂಗಳೂರಿಗೆ ಬಂದಾಗ ಕೋಟೆ ಪ್ರೌಢಶಾಲೆಯಲ್ಲಿ ಭೇಟಿ ಮಾಡಿ ಪುನರ್ಜನ್ಮ ನೀಡಿದ ಆ ಸಂಗೀತ ಶಿರೋಮಣಿ ಮಹಾಮಾತೆಯ ಆಶೀರ್ವಾದ ಪಡೆದು ಧನ್ಯಳಾದಳು ಧನ್ಯತಾ. ಈಗ ಸಂಗೀತ, ನೃತ್ಯ, ಸಾಹಿತ್ಯ, ಯೋಗ ಹೀಗೆ ಬಹುಮುಖ ಪ್ರತಿಭೆಯಾಗಿ ಬೆಳೆಯುತ್ತಿರುವ ಎಲ್ಲರ ಅಚ್ಚುಮೆಚ್ಚಿನ ಶಿಕ್ಷಕಿ ಈ ಧನ್ಯತಾ.

"ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನ ರಸಃ ಫಣಿಃ" ಎಂಬಂತೆ ಶಿಶುವಿರಲಿ, ಪಶುವಿರಲಿ, ವಿಷಜಂತು ನಾಗರಹಾವು ಇರಲಿ ಸಂಗೀತಕ್ಕೆ ತಲೆದೂಗುತ್ತವೆ. ಇದೇ ಭಾರತೀಯ ಸಂಗೀತದ ವೈಶಿಷ್ಟ್ಯ. ಕೇವಲ ಮನರಂಜನೆಯಲ್ಲ, ಮೈಕಲ್ ಜಾಕ್ಸನ್‌ನಂತೆ ಮನಸ್ಸನ್ನು ಶರೀರವನ್ನು ಕೆರಳಿಸುವುದಿಲ್ಲ, ಬದಲಿಗೆ ಮನಸ್ಸನ್ನು ಅರಳಿಸಿ ಮನುಷ್ಯನ್ನು ದೈವತ್ವಕ್ಕೆ ಏರಿಸುವ ಶಕ್ತಿ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿದೆ.

2004 ರಲ್ಲಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಸ್ವರ್ಗಸ್ಥರಾದರು. ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್ ಹಾಗೂ ಶ್ರೀಮತಿ ಗಂಗೂಬಾಯಿ ಹಾನಗಲ್ ಇತ್ತೀಚೆಗೆ ಭಗವಂತನ ಪಾದ ಸೇರಿದರು. ಆದರೂ ಅವರ ಹಾಡುಗಳು ನಿತ್ಯನೂತನ, ಚಿರಪುರಾತನ. ಸದಾಕಾಲ ಎಲ್ಲರಿಗೂ ಪ್ರೇರಣೆ, ಶಾಂತಿ, ಸಮಾಧಾನ, ದೈವೀ ಆನಂದ ನೀಡುವಂತಹುದು. ಅಂತಹ ದಿವ್ಯ ಚೇತನಗಳಿಗೆ ನಾವೆಲ್ಲ ಶ್ರದ್ಧಾ ಸುಮನಗಳನ್ನು ಅರ್ಪಿಸೋಣ. ಅವರುಗಳಲ್ಲಿನ ದೈವೀ ಚೇತನದ ಒಂದಂಶವಾದರೂ ನಮಗೆ ಬರುವಂತಾದರೆ ನಾವೇ ಭಾಗ್ಯಶಾಲಿಗಳು. ನಮ್ಮ ಜೀವನ ಸಾರ್ಥಕವಾದಂತೆ ಅಲ್ಲವೇ?

- ಶ್ರೀಧರ ಸಾಗರ

**ವಿದ್ಯಾಭಾರತಿಯ ಆಶ್ರಯದಲ್ಲಿನ**
**25,584 ಶಾಲೆಗಳಲ್ಲಿ 31,23,012 ವಿದ್ಯಾರ್ಥಿಗಳು**
**ಶಿಕ್ಷಣ ಪಡೆಯುತ್ತಿದ್ದಾರೆ.**

## ಸಂತ ವಚನ

ನೆಲವನ್ನು ಅಗೆದರೆ ಅಲ್ಲಿ ಹೊಂಡ ಉಂಟಾಗುತ್ತದೆ. ಆದರೆ, ಕೆರೆಯಿಂದ ನೀರನ್ನು ತೆಗೆದರೆ ಅಲ್ಲಿ ಹೊಂಡವಾಗುವುದಿಲ್ಲ, ಬದಲಿಗೆ, ಸುತ್ತಲಿನ ನೀರು ಆ ಜಾಗಕ್ಕೆ ಬಂದು ತುಂಬಿಕೊಂಡು ನೀರಿನ ಮೇಲ್ಮೈಯನ್ನು ಸಮತಟ್ಟು ಮಾಡುತ್ತದೆ. ನಾವು ನೀರಿನಂತಾಗಬೇಕೇ ಹೊರತು, ಮಣ್ಣಿನಂತಲ್ಲ, ನಮ್ಮ ಸಮಾಜದಲ್ಲಿ ನ್ಯೂನತೆಯುಂಟಾದಾಗ ನಾವೆಲ್ಲರೂ ಸೇರಿ ಅದನ್ನು ಸರಿಪಡಿಸಬೇಕು.

- ಪೂಜ್ಯ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ



ಪ್ರತಿಷ್ಠಾನದ ಪ್ರಕಲ್ಪವಾದ 'ನೆಲೆ'ಯ ಮಕ್ಕಳ ಬಗ್ಗೆ ನಿಮಗೆಲ್ಲಾ ಗೊತ್ತೇ ಇದೆ. ಓದುವುದರ ಜೊತೆಗೆ ಬೇರೆ ಬೇರೆ ಒಳ್ಳೆಯ ಹವ್ಯಾಸಗಳನ್ನೂ ಅವರು ಬೆಳೆಸಿಕೊಂಡಿದ್ದಾರೆ. ಚಿತ್ರಕಲೆಯಲ್ಲಿ ಕೆಲವರದ್ದು ಎತ್ತಿದ ಕೈಯಾದರೆ, ಇನ್ನು ಕೆಲವರದ್ದು ಆಟೋಟಗಳಲ್ಲಿ, ಇನ್ನು ಕೆಲವರು ಹಾಡು, ಮಿಮಿಕ್ರಿಗಳಲ್ಲಿ, ಹೀಗೆ ಒಬ್ಬೊಬ್ಬರದ್ದು ಒಂದೊಂದು ವಿಶೇಷ ಪ್ರತಿಭೆ. ನೆಲೆಯ ಬಾಲಕ ನಾಗೇಶ ಚಿತ್ರಿಸಿದ ವಿಜಯನಗರದ ಶ್ರೀ ಕೃಷ್ಣದೇವರಾಯನ ಚಿತ್ರ ಇಲ್ಲಿದೆ. ಈ ವರ್ಷ ಶ್ರೀ ಕೃಷ್ಣದೇವರಾಯನ ಪಟ್ಟಾಭಿಷೇಕವಾಗಿ 500ನೆಯ ವರ್ಷ! ಧರ್ಮ ಸಂರಕ್ಷಣೆಯಲ್ಲಿ ಆತನು ಎಂದೂ ಹಿಂದೆ ಬಿದ್ದವನಲ್ಲ, ಆತನ ಕಾಲದಲ್ಲಿ ಹಿಂದೂ ಧರ್ಮವು ಉತ್ತುಂಗದಲ್ಲಿತ್ತು. ಅದಕ್ಕಾಗಿಯೇ ಆತನಿಗೆ 'ಹಿಂದೂ ರಾಯ ಸುರತ್ರಾಣ' ಎಂಬ ಬಿರುದು ಬಂದಿತ್ತು!

## ಹೇಳಿ ಉತ್ತರ!

ನಮ್ಮ ಇತಿಹಾಸ ಪುರಾಣಗಳನ್ನು ಓದುವುದೇ ಒಂದು ವಿಶಿಷ್ಟ ಅನುಭವ. ರಾಮಾಯಣ, ಮಹಾಭಾರತಗಳಲ್ಲಿನ ಕಥೆ, ಉಪಕಥೆಗಳನ್ನು ಓದಲು ಶುರುಮಾಡಿದರೆ, ಸಮಯ ಕಳೆದಿದ್ದೇ ಗೊತ್ತಾಗುವುದಿಲ್ಲ, ಅಂತಹ ಸಾರಪೂರ್ಣ, ಆಸಕ್ತಿದಾಯಕ ಸಾಹಿತ್ಯ ಅದು! ಅಲ್ಲಿನ ಕಥೆಗಳಲ್ಲಿನ ನೀತಿಗಳು ಇಂದಿಗೂ ಅದೆಷ್ಟು ಪ್ರಸ್ತುತವೆಂದರೆ, ಆಧುನಿಕವೆಂದು ನಾವು ಕರೆಯುವ ಈ ಕಾಲದಲ್ಲಿನ ಹೊಸ ಹೊಸ ಸಮಸ್ಯೆ ಗಳಿಗೂ ಕೂಡಾ ಒಮ್ಮೆ ನಮ್ಮ ಇತಿಹಾಸ ಪುರಾಣಗಳ ಪುಟಗಳನ್ನು ಮಗುಚಿದರೆ, ಎಲ್ಲೋ ಒಂದು ಕಡೆ ಪರಿಹಾರದ ಮಾರ್ಗ ಕಾಣಬಹುದು. ಅದಕ್ಕೇ ಅಲ್ಲವೇ, ಇಂದಿನ ಮ್ಯಾನೇಜ್‌ಮೆಂಟ್ ಗುರುಗಳೆಲ್ಲರೂ ಭಗವದ್ಗೀತೆಯ ಮೊರೆಹೋಗಿರುವುದು. ಶ್ರೀಕೃಷ್ಣನನ್ನು ಕೊಂಡಾಡುವುದು!

ಇಂತಹ ಅಮೂಲ್ಯವಾದ ಸಾಹಿತ್ಯವನ್ನು ಓದುವ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ ಎನ್ನಬಹುದು. ಟಿ.ವಿ, ಕಂಪ್ಯೂಟರ್, ಇಂಟರ್‌ನೆಟ್, ಮೊಬೈಲ್ ಮುಂತಾದ ಲಂಗುಲಗಾಮಿಲ್ಲದ ಪ್ರಸಾರ ಮಾಧ್ಯಮಗಳು, ಸಂಪರ್ಕ ಮಾಧ್ಯಮಗಳ ಹಾವಳಿಯ ನಡುವೆ ನಮ್ಮತನವೆನ್ನುವುದು ಕಳೆದುಹೋಗುತ್ತಿದೆ. ನಮ್ಮ ದೋಣಿಯೂ ಪ್ರವಾಹದ ಜೊತೆಯಲ್ಲಿ ತೇಲಿ ಹೋಗುತ್ತಿದೆಯೇನೋ ಎನಿಸುತ್ತದೆ. ಎಲ್ಲಿಗೆ ಎನ್ನುವುದು ಗೊತ್ತಿಲ್ಲ! ನಾವು ನಾವಾಗಿರಬೇಕಾದರೆ, ನಾವು ಯಾರೆಂಬುದು ಮೊದಲು ನಮಗೆಲ್ಲಾ ತಿಳಿದಿರಬೇಕು. ಅದನ್ನು ತಿಳಿಯಲು ಈ ರಾಮಾಯಣ, ಮಹಾಭಾರತ, ಪುರಾಣಗಳು ಸುಲಭ ಮಾರ್ಗಗಳು. ಹಾಗಾಗಿ, ಅವುಗಳನ್ನು ನಮ್ಮ ಮಕ್ಕಳಷ್ಟೇ ಅಲ್ಲ, ನಾವೂ ಓದಬೇಕು. ಪುನಃ ಓದಬೇಕು. ಮನಸ್ಸು-ಮಾತು-ಕೆಲಸ ಈ ಮೂರರಲ್ಲಿಯೂ ನಮ್ಮತನವಿರಬೇಕು. ರಾಮ, ಕೃಷ್ಣರು ಬಾಳಿ ಬದುಕಿದ ಸಂಸ್ಕೃತಿಯ ವಾರಸುದಾರರು ನಾವೆಂದ ಮೇಲೆ, ನಮ್ಮ ನಡೆನುಡಿಗಳು ಅದಕ್ಕೆ ಸರಿಯಾಗಿ ಇರಬೇಡವೇ? ಅದಕ್ಕೇ ಅವನ್ನೆಲ್ಲ ಪುನಃ ಮೆಲುಕು ಹಾಕಲು ನಿಮಗೆ ನಮ್ಮದೊಂದು ಸಣ್ಣ ಸಹಾಯ. ಪ್ರತೀ ಸಂಚಿಕೆಯಲ್ಲಿ ರಾಮಾಯಣ / ಮಹಾಭಾರತ / ಪುರಾಣಗಳಿಂದ ಆಯ್ದ ಕೆಲವು ಪ್ರಶ್ನೆಗಳನ್ನು ಕೇಳುತ್ತೇವೆ. ಅದಕ್ಕೆ ನೀವು ಹೇಳಿ ಉತ್ತರ!

ವಯಸ್ಸಿನ ಭೇದವಿಲ್ಲ, ಯಾರು ಬೇಕಾದರೂ ಉತ್ತರ ಬರೆದು ಕಳುಸಬಹುದು. ಅಂಚೆಕಾರ್ಡಿನಲ್ಲಾದರೂ ಸಾಕು. ಪ್ರತೀ ತಿಂಗಳ 5ನೇ ತಾರೀಖಿನೊಳಗೆ ನಮಗೆ ನಿಮ್ಮ ಉತ್ತರ ತಲುಪಬೇಕು. ನಿಮ್ಮ ಹೆಸರು, ವಯಸ್ಸು ವೃತ್ತಿಗಳ ಮಾಹಿತಿಯೂ ನಿಮ್ಮ ಪೂರ್ಣ ಅಂಚೆ ವಿಳಾಸದ ಜೊತೆಗಿರಲಿ. ಪ್ರತೀ ಮೂರು ಸಂಚಿಕೆಗಳಿಗೊಮ್ಮೆ ಬಹುಮಾನವಿದೆ. ಮೂರೂ ಸಂಚಿಕೆಗಳಲ್ಲಿನ ಅತಿ ಹೆಚ್ಚು ಪ್ರಶ್ನೆಗಳಿಗೆ ಸರಿಯುತ್ತರ ಬರೆದವರಿಗೆ ಬಹುಮಾನ ಕಳುಹಿಸಲಾಗುವುದು.


ಆಶ್ರಯರಹಿತರು...
ಬುದ್ಧಿಮಾಂದ್ಯರು...
ಅನಾರೋಗ್ಯಪೀಡಿತರು...
ಗುಡ್ಡಗಾಡು ಜನರು...
ನೊಂದವರು...

ಇವರಿಗೆ
ನೆರವಾಗುವಿರಾ
ಸಮಯ ನೀಡುವಿರಾ?



ಹಾಗಿದ್ದರೆ...

‘ಹಿಂದು ಸೇವಾ ಪ್ರತಿಷ್ಠಾನ’

ನಿಮ್ಮನ್ನು ಸ್ವಾಗತಿಸುತ್ತದೆ

**‘ಪ್ರತಿಷ್ಠಾನ’: ಏನಿದು?**

- ಮೂರು ದಶಕಗಳಿಂದ ಸಮಾಜಸೇವೆಯಲ್ಲಿ ತೊಡಗಿ, ಪ್ರತಿ ವರ್ಷವೂ ನೂರಾರು ಯುವಕ-ಯುವತಿಯರಿಗೆ ಸೇವಾ ತರಬೇತಿ ನೀಡಿ, ‘ಸೇವಾ ವ್ರತ’ದ ದೀಕ್ಷೆ ಕೊಡುತ್ತಿರುವ ಸಂಸ್ಥೆ.
- ಕರ್ನಾಟಕದಾದ್ಯಂತ ಗ್ರಾಮ ಹಾಗೂ ನಗರಗಳಲ್ಲಿ 1,500ಕ್ಕೂ ಹೆಚ್ಚು ಸೇವಾ ಚಟುವಟಿಕೆಗಳನ್ನು ನಡೆಸುತ್ತಿದೆ.
- ಇದುವರೆಗೂ 4,000 ಯುವಕ-ಯುವತಿಯರು ‘ಸೇವಾವ್ರತಿ’ಗಳಾಗಿ ಸಮಾಜಕಾರ್ಯ ಮಾಡಿದ್ದಾರೆ.

**ಅರ್ಹತೆ**

- ಸಮಾಜ ಸೇವೆ ಮಾಡಬೇಕೆಂಬ ಇಚ್ಛೆಯಿರಬೇಕು.
- 18 ವರ್ಷ ಮೇಲ್ಪಟ್ಟವರಾಗಿದ್ದು ಆರೋಗ್ಯವಂತರಾಗಿರಬೇಕು.
- 10ನೇ ತರಗತಿ ಅಥವಾ ಹೆಚ್ಚಿನ ವಿದ್ಯಾಭ್ಯಾಸ ಮಾಡಿರಬೇಕು.

ಗಮನಿಸಿ:
1. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಮತ್ತು ಅಂಕಪಟ್ಟಿಯನ್ನು ತರಬೇಕು.
2. ಸಂದರ್ಶನಕ್ಕೆ ಬರುವಾಗ ಕುಟುಂಬದ ಹಿರಿಯರೊಬ್ಬರನ್ನು ಕರೆತರಬೇಕು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಹಿಂದು ಸೇವಾ ಪ್ರತಿಷ್ಠಾನ
ಅಜಿತಶ್ರೀ, 8/28, ಬಸವನಗುಡಿ ರಸ್ತೆ, ಬೆಂಗಳೂರು-560 004.
ದೂರವಾಣಿ: 080-2660 8926, 94803 16629, 94803 16625
ಮಿಂಚೋಲೆ: hinduseva@gmail.com

ಸಂದರ್ಶನ (INTERVIEW)
ದಿನಾಂಕ: ಸಮಯ:
ಸ್ಥಳ:

www.hinduseva.org


ಕಳೆದ ಬಾರಿಯೇ ಹೇಳಿದಂತೆ, ಸೇವಾವ್ರತಿ ಅಭಿಯಾನ ಪ್ರಾರಂಭವಾಗಿದೆ. ಈ ಅಭಿಯಾನದ ಸಮಯ ದಲ್ಲಿ ಪ್ರತಿಷ್ಠಾನವನ್ನು ಹೆಚ್ಚು ಜನರಿಗೆ ಪರಿಚಯಿಸುವುದು, ಸೇವೆ ಮಾಡಲು ಇರುವ ಈ ಅವಕಾಶವನ್ನು ಯುವಕ ಯುವತಿಯರಿಗೆ ತಿಳಿಸುವುದು ನಮ್ಮೆಲ್ಲರ ಹೊಣೆ. ಹೆಚ್ಚು ಹೆಚ್ಚು ಜನರು ಸೇವಾವ್ರತಿಗಳಾಗಿ ಹೊರಟಲ್ಲಿ ನಮ್ಮ ಪ್ರಯತ್ನ ಸಾರ್ಥಕ. ಎಣ್ಣೆ, ಬತ್ತಿ ಇದ್ದರೆ ಸಾಕೇ? ಬೆಳಕು ಬರಬೇಕೆಂದರೆ ದೀಪ ಹಚ್ಚಬೇಕು. ಹಾಗೆಯೇ, ಸೇವೆ ಮಾಡಬೇಕೆನ್ನುವ ತುಡಿತ ಇರುವವರು ನಮ್ಮ ನಡುವೆ ಅದೆಷ್ಟೋ ಮಂದಿ ಇದ್ದಾರೆ. ಈ ವಿಷಯದಲ್ಲಿ ತಾಯಿ ಭಾರತಿ ಬಡವಳಲ್ಲ! ಆದರೆ, ನಾವು ದೀಪ ಹಚ್ಚುವ ಕೆಲಸ ಮಾಡಬೇಕು.

ಈ ಅಭಿಯಾನಕ್ಕೆ ಪೂರಕವಾದ ಕರಪತ್ರವನ್ನು ಮೇಲೆ ಕೊಟ್ಟಿದೆ. ನಿಮ್ಮ ಊರಿನಲ್ಲೇ ಸಂದರ್ಶನವಾದರೆ ಚೆನ್ನ. ಅದಕ್ಕೆ ನಿಮ್ಮ ಊರಿನಲ್ಲಿ ಕನಿಷ್ಠ 10 ಜನ ಸೇವಾವ್ರತಿಗಳಾಗಿ ಹೊರಡಲು ತಯಾರಿರಬೇಕು. ಸೇವೆಯ ಹೆಚ್ಚು ದೀಪಗಳನ್ನು ಹಚ್ಚುವ ಕೆಲಸ ನಿಮ್ಮಿಂದಾಗಲಿ! ಶುಭ ಹಾರೈಕೆಗಳು.

– **ಶ್ರೀಧರ ಸಾಗರ**, ನಿರ್ದೇಶಕ

**ಈ ಸಂಚಿಕೆಯ ಪ್ರಶ್ನೆಗಳು ಇಲ್ಲಿವೆ.**

1. ಗಂಗೆಯನ್ನು ಧರೆಗಿಳಿಸಿದ ಶ್ರೀರಾಮನ ಪೂರ್ವಜ ಯಾರು?
2. ಸಮುದ್ರಕ್ಕೆ ಸಾಗರ ಎನ್ನುವ ಹೆಸರು ಯಾವ ರಾಜನಿಂದ ಬಂತು?
3. ಸರ್ಪಗಳ ತಾಯಿ ಯಾರು?
4. ಇಂದ್ರನ ಕುದುರೆಯ ಹೆಸರೇನು?
5. ಮಹಾಭಾರತದ ಮೂಲ ಹೆಸರೇನು?


**ಸಂಪಾದಕೀಯ ಸಹಕಾರ**

ಶ್ರೀಮತಿ ಮೃದುಲಾ ವಿಜಯೇಂದ್ರ,
ಶ್ರೀಮತಿ ವರಲಕ್ಷ್ಮಿ, ಶ್ರೀ ನರೇಂದ್ರ,
ಶ್ರೀ ಗಂಗನಂದನ

## ಬಾಲದೀವಿಗೆ

# ಜ್ಞಾನ-ಕರ್ಮ ಸಮನ್ವಯ

ಧರ್ಮರಾಜನ ವಿದ್ಯಾರ್ಥಿಜೀವನದ ಒಂದು ಕಥೆ. ಒಂದು ದಿನ ಗುರುಗಳು ಕೌರವ ಪಾಂಡವರೆಲ್ಲರಿಗೂ ಒಂದು ಪಾಠ ಹೇಳಿದರು. 'ಸತ್ಯಂ ವದ, ಧರ್ಮಂ ಚರ ಸ್ವಾಧ್ಯಾಯಾನ್ಮಾ ಪ್ರಮದಃ' ''ನಾಳೆ ಈ ಪಾಠವನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬನ್ನಿರಿ'' ಎಂದು ಹೇಳಿದರು. ತರಗತಿ ಮುಗಿಯಿತು. ವಿದ್ಯಾರ್ಥಿಗಳು ಸ್ವಸ್ಥಾನಕ್ಕೆ ಹೋದರು. ಮರುದಿನ ಪಾಠಶಾಲೆ ಆರಂಭವಾಯಿತು. ಆಚಾರ್ಯರು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಕೇಳಿದರು. ''ನಿನ್ನೆ ಹೇಳಿದ ಪಾಠ ಅಭ್ಯಾಸ ಆಯಿತೇ?'' ಎಲ್ಲ ವಿದ್ಯಾರ್ಥಿಗಳೂ ಉತ್ತರಿಸಿದರು. ''ಓ ಆಯಿತು; ಅದರಲ್ಲೇನಿದೆ, ಮೂರು ವಾಕ್ಯಗಳು ಮಾತ್ರ ಇದ್ದವು'' ಆದರೆ ಧರ್ಮರಾಜನ ಸರದಿ ಬಂದಾಗ ಆತ ಹೀಗೆ ನುಡಿದ. ''ಕ್ಷಮಿಸಬೇಕು ಗುರುಗಳೇ, ನನ್ನ ಪಾಠ ಅಭ್ಯಾಸವಾಗಿಲ್ಲ''. ಗುರುಗಳಿಗೆ ಸ್ವಲ್ಪ ಕೋಪ ಬಂತು. ''ನಾಳೆಯಾದರೂ ಚೆನ್ನಾಗಿ ಅಭ್ಯಾಸ ಮಾಡು'' ಎಂದು ಎಚ್ಚರಿಸಿದರು. ಆದರೆ ಮರುದಿನವೂ ಆಗಿರಲಿಲ್ಲ. ಆದರೆ ಐದನೆಯ ದಿನ ಮಾತ್ರ ಧರ್ಮರಾಜನ ಮುಖದಲ್ಲಿ ಸಮಾಧಾನವಿತ್ತು. ಅವನು ಆನಂದದಿಂದ ಗುರುಗಳ ಬಳಿ ಹೋದ. ಗುರುಗಳಿಗೆ ಆ ಪಾಠ ಹೇಳಿ ಒಪ್ಪಿಸಿದ, ಗುರುಗಳು ಸಮಾಧಾನಗೊಂಡರು ಹಾಗೆಯೇ ಒಂದು ಪ್ರಶ್ನೆ ಕೇಳಿದರು : ''ಯುಧಿಷ್ಠಿರ, ನಿನಗೆ ಇಷ್ಟು ಸಣ್ಣ ವಾಕ್ಯ ಅಭ್ಯಾಸ ಮಾಡಲು ಅಷ್ಟು ದಿನ ಹಿಡಿಯಿತಲ್ಲ, ಏಕೆ?'' ಅದಕ್ಕೆ ಯುಧಿಷ್ಠಿರನೆಂದ : ''ಏನು ಮಾಡಲಿ ಗುರುಗಳೇ, ನಾನು ಬಹಳ ಪ್ರಯತ್ನ ಪಟ್ಟೆ. ಒಮ್ಮೆ ತಿಳಿದು, ಒಮ್ಮೆ ತಿಳಿಯದೇ, ಒಮ್ಮೆ ವಿನೋದದಲ್ಲಿ ನನ್ನಿಂದ ಅಸತ್ಯವಾದ ಮಾತು ಹೊರಬರುತ್ತಿತ್ತು. ಕೊನೆಗೆ ನಿನ್ನೆಯಿಂದ ಇವತ್ತಿನವರೆಗೆ ನಾನು ಒಮ್ಮೆ ಕೂಡ ಸುಳ್ಳಾಡಲಿಲ್ಲ. ಆದ್ದರಿಂದ ನಾನು ನಿಸ್ಸಂಶಯವಾಗಿ ನನ್ನ ಪಾಠ ಅಭ್ಯಾಸವಾಗಿದೆಯೆಂದು ಹೇಳಬಲ್ಲೆ. ಯುಧಿಷ್ಠಿರನ ಮಾತಿನಿಂದ ಆಚಾರ್ಯರು ಚಕಿತಗೊಂಡರು. ''ಧನ್ಯ ಯುಧಿಷ್ಠಿರ, ನೀನು ಗುರುವಿಗೆ ಗುರುವಾದೆ. ಅಭ್ಯಾಸ ಮಾಡುವುದರ ನಿಜವಾದ ಅರ್ಥ ನೀನು ನಮಗೆ ತಿಳಿಸಿದೆ. ನಾವು ಇಂದಿನವರೆಗೆ ಮಕ್ಕಳಿಗೆ ಬಾಯಿಪಾಠ ಮಾಡಿಸುತ್ತಿದ್ದೆವು. ಶಬ್ದಾರ್ಥ ಹೇಳಿಕೊಡುತ್ತಿದ್ದೆವು. ಆದರೆ ನಾವು ಓದಿದ ಪಾಠ ಹೃದಯದಲ್ಲಿ ಬೇರೂರಬೇಕು. ಕೃತಿಯಲ್ಲಿ ಇಳಿಯಬೇಕು ಎನ್ನುವ ಕಡೆ ನಮ್ಮ ಗಮನವಿರಲಿಲ್ಲ. ಈ ರೀತಿಯಿಂದ ಎಲ್ಲರೂ ಜ್ಞಾನವನ್ನು ಸಂಪಾದಿಸಿದರೆ ಭೂಮಿಯ ಮೇಲೆ ಸ್ವರ್ಗ ಇಳಿದುಬಂದೀತು.

ಧರ್ಮರಾಯನ ಈ ಕಥೆ ಭಾರತೀಯ ಸಂಸ್ಕೃತಿಯ ಸಾರವೇ ಆಗಿದೆ. ಜ್ಞಾನಪ್ರಾಪ್ತಿಯ ಆದರ್ಶಗಳನ್ನು ಸ್ಪಷ್ಟಗೊಳಿಸಿ ಶಿಕ್ಷಣವನ್ನು ಹೇಗೆ ಕೊಡಬೇಕು ಮತ್ತು ಪಡೆಯಬೇಕು ಎನ್ನುವುದನ್ನು ಈ ಕಥೆ ಹೇಳುತ್ತದೆ. ಜ್ಞಾನ ಮತ್ತು ಕರ್ಮಗಳ ಸಮನ್ವಯವನ್ನು ಹೇಳಿದೆ. ಮಂಗಳಕರವಾದ ಮತ್ತು ಯಶಸ್ಕರವಾದ ಕರ್ಮದಿಂದ ಪ್ರಕಟಗೊಳ್ಳುವ ಜ್ಞಾನವೇ ಶ್ರೇಷ್ಠವಾದದ್ದು. ಅಹಂಕಾರ, ದುರಭಿಮಾನ, ವಾಚಾಳಿತನ ಹುಟ್ಟಿಸುವ ಜ್ಞಾನವು ನಿಜವಾದ ಜ್ಞಾನವಲ್ಲ. ಶಾಂತಿ ಸಮಾಧಾನ ನೀಡಿ ಶ್ರೇಷ್ಠತೆಯ ಕಡೆಗೆ ಒಯ್ಯುವ ಜ್ಞಾನವೇ ಉನ್ನತವಾದದ್ದು. ವಿನಯವೂ ತನ್ಮಯತೆಯೂ ಉಳ್ಳ ತನ್ನಲ್ಲಿರುವ ಕೊರತೆಯನ್ನು ಒಪ್ಪಿಕೊಳ್ಳುವ ಜ್ಞಾನವೇ ನಿಜವಾದದ್ದು. ಪ್ರಕಾಶವನ್ನು ನೀಡದವನು ಸೂರ್ಯನೇ ಅಥವಾ ಸೌಂದರ್ಯ, ಸುಗಂಧ ಇಲ್ಲದ ಹೂವೇ? ನೀರಿಲ್ಲದ ನದಿ ಎಂಥದ್ದು? ಅಂತೆಯೇ ಜೀವನವನ್ನು 'ಸತ್ಯ ಶಿವ ಸುಂದರ'ವನ್ನಾಗಿ ಮಾಡಲಾಗದ ಮತ್ತು ಸಾತ್ವಿಕತೆಯನ್ನು ನೀಡಲಾಗದ ಜ್ಞಾನಕ್ಕೆ ಜ್ಞಾನವೆಂದು ಹೇಳಲಾಗದು.

ನಮ್ಮ ಪ್ರಾಚೀನ ಋಷಿಗಳು ಜ್ಞಾನ ಮತ್ತು ಕರ್ಮದ ಸಂಗಮವನ್ನು ಅತ್ಯವಶ್ಯವೆಂದು ತಿಳಿದಿದ್ದರು. ನುಡಿದಂತೆ ನಡೆಯುವವರು ವಂದನೀಯರು. ಕೆಲಸವಿಲ್ಲದ ಮಾತುಗಾರಿಕೆ ವ್ಯರ್ಥವೆಂದು ಹೇಳಿದ್ದಾರೆ.

ಮನುಷ್ಯ ಸಮಾಜ ಜೀವಿ. ಸಮಾಜದ ಎಲ್ಲಾ ಸ್ತರಗಳ ಸರ್ವರೀತಿಯಿಂದ ಅಭಿವೃದ್ಧಿ ಹೊಂದುವಂತಹ ದೂರಾಲೋಚನೆಯಿಂದ ನಮ್ಮ ಪ್ರಾಚೀನರು ಮೌಲ್ಯಗಳನ್ನು ರೂಪಿಸಿದ್ದರು. ಆದರದು ಬರೀ ವೇದಿಕೆಗಳ ಮೇಲೆ ಆಡುವ ಮಾತುಗಳಾಗಿವೆ. ಒಂದೆಡೆ ಪ್ರಕೃತಿ ಮಾತೆಯನ್ನು ಕಾಪಾಡಲು ಪರಿಸರವಾದಿಗಳು ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸುತ್ತಿದ್ದರೆ ಇನ್ನೊಂದೆಡೆ ಸಾಲುಮರದ ತಿಮ್ಮಕ್ಕನಂತಹವರು ಸದ್ದಿಲ್ಲದೇ ಕಿಲೋಮೀಟರ್‌ಗಟ್ಟಲೆ ಉದ್ದಕ್ಕೂ ಗಿಡಗಳನ್ನು ನೆಟ್ಟು ಪೋಷಿಸಿ ಪ್ರಕೃತಿಗೇ ತಾಯಿಯಾಗಿ ಮೆರೆದಿದ್ದಾಳೆ. ಇದೇ ಅಲ್ಲವೇ ಜ್ಞಾನ ಕರ್ಮ ಸಮನ್ವಯ.

-ಪ್ರ.ಗ. ಸಹಸ್ರಬುದ್ಧೆಯವರ 'ಜೀವನ ಮೌಲ್ಯಗಳು' ಪುಸ್ತಕದಿಂದ

**ರಾಮಾಯಣ, ಮಹಾಭಾರತದ ಕುರಿತಾಗಿ ವಿದ್ಯಾಭಾರತಿ ನಡೆಸಿದ ಸಂಸ್ಕೃತಿ ಪರೀಕ್ಷೆಯಲ್ಲಿ ಒಟ್ಟು 14 ಲಕ್ಷ ಮಕ್ಕಳು ಪಾಲ್ಗೊಂಡಿದ್ದಾರೆ.**

## ಹಬ್ಬ ಹರಿದಿನ

# ಗಣೇಶ ಚತುರ್ಥಿ

ಭಾದ್ರಪದ ಶುದ್ಧ ಚತುರ್ಥಿ ಹಿಂದುಗಳಿಗೆ ಗಣಪತಿ ಹಬ್ಬದ ದಿನ. ಆ ದಿನ ಗಣಪತಿಯ ಮಣ್ಣಿನ ಮೂರ್ತಿಯನ್ನಿಟ್ಟು ಬಣ್ಣ ಬಣ್ಣಗಳಿಂದ ಅಲಂಕರಿಸಿ, ಸುಂದರವಾದ ಮಂಟಪ ಕಟ್ಟಿ, ಷೋಡಶೋಪಚಾರ ಪೂಜೆ ಸಲ್ಲಿಸಿ, ಕಡುಬು ಕಜ್ಜಾಯ, ಪಂಚಕಜ್ಜಾಯ ನೈವೇದ್ಯ ಮಾಡಿ, ವಿನಿಯೋಗಿಸುವುದು ಭಾರತೀಯ ಕುಟುಂಬಗಳಲ್ಲೆಲ್ಲಾ ನಡೆದುಬಂದ ಪದ್ಧತಿ.

**ಆಕಾರ ವೈಶಿಷ್ಟ್ಯ :** ಗಣಪತಿಯ ಆಕಾರದಲ್ಲೇ ಅದ್ಭುತ ಕಲ್ಪನೆ ಮತ್ತು ಸಂದೇಶ ಅಡಗಿದೆ. ದೊಡ್ಡ ತಲೆಯುಳ್ಳ ಅವನನ್ನು ಆರಾಧಿಸುವವರು 'ದೊಡ್ಡ ತಲೆಯುಳ್ಳವರು' ಅಂದರೆ ಬುದ್ಧಿವಂತರಾಗುತ್ತಾರೆ, ಎಂದರ್ಥ. ಆನೆಯ ತಲೆಯಲ್ಲಿ ಜ್ಞಾನೇಂದ್ರಿಯದೊಂದಿಗೆ ಕರ್ಮೇಂದ್ರಿಯವಾದ ಸೊಂಡಿಲೂ ಇದೆ. ಅಂದರೆ ಸಮಾಜ ಸುಧಾರಕರು ಕೇವಲ ಜ್ಞಾನಿಗಳೂ ಬುದ್ಧಿಶೀಲರೂ ಆದರೆ ಸಾಲದು; ಅವರು ಕರ್ಮಶೀಲರೂ ಆಗಿರಬೇಕು ಎಂಬುದು ಇದರ ಸಂಕೇತ. ಅವನ ವಕ್ರತುಂಡ (ಅಂದರೆ ಡೊಂಕಾದ ಸೊಂಡಿಲು) ಓಂಕಾರದ ಪ್ರತೀಕ. ಅವನು 'ಶೂರ್ಪಕರ್ಣ' ಅಂದರೆ 'ಮೊರದಂತೆ ಕಿವಿಯುಳ್ಳವ'. ಮೊರದಲ್ಲಿ ಧಾನ್ಯ ಕೇರಿದಾಗ ಟೊಳ್ಳು ಜೊಳ್ಳು ದೂರವಾಗಿ ನೆಲ್ಲು ಮಾತ್ರ ನಿಲ್ಲುತ್ತದೆ. ಹಾಗೇ ನಮಗೆ ಹೊಗಳಿಕೆ ತೆಗಳಿಕೆಗಳು ಬಂದಾಗ ಅವುಗಳಲ್ಲಿ ಸತ್ಯಾಂಶವನ್ನು ಮಾತ್ರ ಗ್ರಹಿಸಬೇಕು ಎಂಬುದು ಅದರ ಸಂಕೇತ.

ಅವನು 'ಮಹಾಕಾಯ' ಅಂದರೆ ದೊಡ್ಡ ಹೊಟ್ಟೆಯವ, ಅವನ ಆ ದೊಡ್ಡ ಹೊಟ್ಟೆ ಬ್ರಹ್ಮಾಂಡದ ಸಂಕೇತ. ಅವನು ಧಾನ್ಯಾಧಿದೇವತೆಯೂ ಹೌದು. 'ಲಂಬೋದರ' ಎಂಬುದು ಧವಸ ತುಂಬಿದ ಕಣಜದ ಸಂಕೇತ. ಅವನು ಹೊಟ್ಟೆಗೆ ಸುತ್ತಿಕೊಂಡಿರುವ ಸರ್ಪ, ಬ್ರಹ್ಮಾಂಡವನ್ನು ಹೊತ್ತಿರುವ ಆದಿಶೇಷ. ಅದು ಕುಂಡಲಿನೀ ಶಕ್ತಿಯ ಪ್ರತೀಕವೂ ಹೌದು. ಅವನ ಕೈಯಲ್ಲಿರುವ ಪಾಶ-ಅಂಕುಶಗಳು ನಮ್ಮಲ್ಲಿರುವ ರಾಗ-ದ್ವೇಷಗಳನ್ನು ನಿಯಂತ್ರಿಸುವ ಸಾಧನಗಳು. ಅವನ ಏಕದಂತ ಏಕಾಗ್ರತೆಯ ಸೂಚಿಯಾಗಿದೆ. ಗಣೇಶ ಮೋದಕ ಪ್ರಿಯ, ಗಣೇಶ ಪೂಜೆಯಿಂದ ನಮಗೆ ಮೋದ ಎಂದರೆ ಆನಂದ ದೊರೆಯುತ್ತದೆ.

ಅವನದು ಚಿಕ್ಕ ಕಣ್ಣು. ಸಮಾಜದಲ್ಲಿ ಬಾಳುವ ನಾವು ಪ್ರತಿಯೊಂದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ಮುಂದುವರಿಯಬೇಕು ಎಂಬುದನ್ನೇ ಆ ಸೂಕ್ಷ್ಮ ದೃಷ್ಟಿಯ ಮೂಲಕ ಗಣೇಶ ಸೂಚಿಸುತ್ತಿದ್ದಾನೆ. ಗಣೇಶನ ಪೂಜೆಯಿಂದ ಎಲ್ಲ ಕ್ಷೇತ್ರದಲ್ಲೂ ಸಿದ್ಧಿ ಖಚಿತ. ಜೊತೆಗೆ ಲಾಭ ಕ್ಷೇಮವೂ ಸಹ.

ಪುಟ 7ಕ್ಕೆ



## ಯೋಗಾಸನ

# ಧನುರಾಸನ



ಹಾಸಿನ ಮೇಲೆ ಮುಖ ಕೆಳಗೆ ಹಾಕಿ ಮಲಗಿ ಕಾಲುಗಳನ್ನು ಕೈಗಳಲ್ಲಿ ಹಿಡಿದು ಮೇಲಕ್ಕೆ ಎತ್ತಿ. ತಲೆಯನ್ನು ಆದಷ್ಟು ಎದಕ್ಕೆ ಎಳೆಯಿರಿ. ದೇಹದ ಭಾರ ಹೊಟ್ಟೆಯ ಮೇಲೆ ಇರುತ್ತದೆ. ಕಾಲನ್ನು ಎತ್ತಿದ ನಂತರ ಪಾದಗಳನ್ನು ಮಂಡಿಗಳನ್ನು ಜೋಡಿಸಿ. ಉಸಿರಾಟ ಸ್ವಲ್ಪ ಜೋರಾದರೂ ಚಿಂತೆಯಿಲ್ಲ (ಚಿತ್ರದಲ್ಲಿತೋರಿಸಿದಂತೆ)

**ಉಪಯೋಗ :** ಜೀರ್ಣಕ್ರಿಯೆಗೆ ಸಹಾಯ. ಬೆನ್ನು ನೋವು ನಿವಾರಣೆಗೆ ಸಹಕಾರಿ.

# ಅಪ್ರತಿಮ ಸಾಧಕಿ ಮಾಲತಿ ಹೊಳ್ಳ

## ಕೀಳರಿಮೆಯೇ ದೊಡ್ಡ ಅಂಗವಿಕಲತೆ

ದೇಹದ ಅಂಗದಲ್ಲುಂಟಾಗಿರುವ ವಿಕಲತೆಗಿಂತ ನಮ್ಮಲ್ಲಿರುವ ಕೀಳರಿಮೆಯೇ ದೊಡ್ಡ ಅಂಗವಿಕಲತೆ. ಬದುಕಿನಲ್ಲಿ ಯಶಸ್ಸಿನ ಹಾದಿ ಸಿಗಬೇಕಾದರೆ ಸಾಕಷ್ಟು ಶ್ರಮ ಪಡಬೇಕು. ನಮ್ಮ ದೇಹಕ್ಕೆ ಸಿಗುವ ಪ್ರತಿಯೊಂದು ಕಷ್ಟವೂ ನಮ್ಮ ಮನಸ್ಸನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ. ಈ ಕಾರಣಕ್ಕಾಗಿಯೇ ದೈಹಿಕ ಅಸಮರ್ಥತೆಯ ನಡುವೆ ನಾನು ಕ್ರೀಡೆಯನ್ನೇ ಆಯ್ಕೆ ಮಾಡಿಕೊಂಡೆ ಎನ್ನುತ್ತಾರೆ ಮಾಲತಿ ಹೊಳ್ಳ.

ಒಂದು ವರ್ಷದ ಮಗುವಾಗಿದ್ದಾಗಲೇ ಆಕೆಗೆ ಅಂಟಿಕೊಂಡಿದ್ದು ಪೋಲಿಯೋ ರೋಗ. ಆ ರೋಗ ಆಕೆಯನ್ನು ಹೈರಾಣಗೊಳಿಸಿದ್ದು ಸಣ್ಣ ಪ್ರಮಾಣದಲ್ಲೇನಲ್ಲ. ಒಂದು ಕೈಯೋ ಕಾಲೋ ಆ ರೋಗಕ್ಕೆ ತುತ್ತಾಗಿದ್ದರೆ ಆಕೆ ಅಷ್ಟೇನೂ ವ್ಯಥೆ ಪಡಬೇಕಾಗಿರಲಿಲ್ಲ. ಆದರೆ ಪೋಲಿಯೋ ರೋಗ ಆಕೆಯ ಸೊಂಟದ ಕೆಳಗಿನ ಸಂಪೂರ್ಣ ಭಾಗವನ್ನೇ ನಿಶ್ಚೇಷ್ಟಿತಗೊಳಿಸಿತ್ತು. ಇಡೀ ಬದುಕಿಗೆ ಕತ್ತಲು ಕವಿದ ಸ್ಥಿತಿ. ಗಾಲಿಕುರ್ಚಿಯಲ್ಲಿ ಕುಳಿತೇ ಜೀವನ ದೂಡಬೇಕಾದ ಸನ್ನಿವೇಶ.

ಆದರೆ ಆಕೆ ಅಧೀರಳಾಗಲಿಲ್ಲ. ತನಗೊದಗಿದ ಈ ಸಂಕಟವನ್ನೇ ಸವಾಲಾಗಿ ಸ್ವೀಕರಿಸಿದಳು. ಶರೀರ ದುರ್ಬಲವಾಗಿದ್ದರೂ ಮನಸ್ಸು ಮಾತ್ರ ಕಲ್ಲುಬಂಡೆಯಂತೆ ಗಟ್ಟಿಯಾಗಿತ್ತು. ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಹಠ ಮನದಲ್ಲಿ ಮೂಡಿತ್ತು. ಆ ಹಠದ ಪರಿಣಾಮವಾಗಿಯೇ ಆಕೆ ಎತ್ತರೆತ್ತರಕ್ಕೆ ಏರುತ್ತಲೇ ಹೋದಳು. ಅಂತಾರಾಷ್ಟ್ರೀಯ ಮಟ್ಟದಲ್ಲೂ ಹೆಸರು ಗಳಿಸಿದಳು. ಅರ್ಜುನ, ಏಕಲವ್ಯ, ಪದ್ಮಶ್ರೀ ಮೊದಲಾದ ಉನ್ನತ ಪ್ರಶಸ್ತಿಗಳು ಈ ವಿಕಲಾಂಗಿನಿಯನ್ನು ಹುಡುಕಿಕೊಂಡು ಬಂದವು.

ಆ ದಿಟ್ಟಮಹಿಳೆಯೇ ಶ್ರೀಮತಿ ಮಾಲತಿ ಕೆ. ಹೊಳ್ಳ. ವಿಕಲಾಂಗ ಕ್ರೀಡಾಪಟುಗಳಿಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜರುಗುವ ಪ್ಯಾರಾ ಒಲಂಪಿಕ್‌ನಲ್ಲಿ ಸುವರ್ಣ ಪದಕ ಗೆದ್ದು ಭಾರತಕ್ಕೆ ಕೀರ್ತಿ ತಂದ ಕನ್ನಡತಿ. ಒಲಂಪಿಕ್ಸ್‌ನಲ್ಲಿ ನಮ್ಮ ಸದೃಢ ಶರೀರದ ಕ್ರೀಡಾಪಟುಗಳು ಭಾರತಕ್ಕೆ ಸುವರ್ಣ ಪದಕ ತರುವ ಮೊದಲೇ ಮಾಲತಿ ಹೊಳ್ಳ ಸುವರ್ಣ ಪದಕ ಗೆದ್ದಾಗಿತ್ತು.

ಮಾಲತಿ ಹೊಳ್ಳ ಹುಟ್ಟಿದ್ದು ಬೆಂಗಳೂರಿನಲ್ಲಿ, 1958ರ ಜುಲೈ 6ರಂದು ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಆಕೆ ಎಲ್ಲ ಮಕ್ಕಳಂತೆ ಕುಣಿದು ಕುಪ್ಪಳಿಸಿ, ಆಡಿ ಹಾಡಿ ನಲಿಯುವ ಕನಸು ಕಂಡಿದ್ದಳು. ಆದರೆ ವಿಧಿಯ ಲೀಲೆ! ಒಂದು ವರ್ಷದ ಮಗುವಾಗಿದ್ದಾಗಲೇ ಪೋಲಿಯೋ ರೋಗಕ್ಕೆ ತುತ್ತಾದಳು. ಶರೀರದ ಕೆಳಭಾಗ ಕ್ರಮೇಣ ನಿಷ್ಕ್ರಿಯವಾಗತೊಡಗಿತು. ಪೋಲಿಯೋ ರೋಗದಿಂದ ಮುಕ್ತಿ ಪಡೆಯಲು ವಿವಿಧ ಬಗೆಯ ಚಿಕಿತ್ಸೆಗಳನ್ನು ತಂದೆತಾಯಿ ಕೈಗೊಂಡರು. ಇದಕ್ಕಾಗಿ ಮಾಲತಿ 15 ವರ್ಷಗಳಷ್ಟು ದೀರ್ಘಕಾಲ ಚೆನ್ನೈನ ಆರ್ಥೋಪೆಡಿಕ್ ಸೆಂಟರ್‌ನಲ್ಲಿ ಇರಬೇಕಾಯಿತು. ಆ 15 ವರ್ಷಗಳಲ್ಲಿ ಮಾಲತಿ ತನ್ನ ವಿಕಲಾಂಗ ಸರಿಪಡಿಸಿಕೊಳ್ಳಲು 32 ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಆದರೆ ಪ್ರಯೋಜನ ಮಾತ್ರ ಶೂನ್ಯ. ಮಾಲತಿ ಮಾತ್ರ ಅಧೀರಳಾಗಲಿಲ್ಲ. ಈ ಚಿಕಿತ್ಸೆಗಳಿಂದೆಲ್ಲ ಏನೂ ಪ್ರಯೋಜನವಿಲ್ಲ. ಕ್ರೀಡೆ, ಆಟೋಟದಲ್ಲಿ ಪಾಲ್ಗೊಳ್ಳುವುದೊಂದೇ ನನ್ನ ಈ ನ್ಯೂನತೆಗೆ ಸರಿಯಾದ ಮದ್ದು ಎಂಬ ನಿರ್ಧಾರಕ್ಕೆ ಮಾಲತಿ ಒಂದು ದಿನ ಬಂದಳು. ಒಮ್ಮೆ ಮನದಲ್ಲಿ ಇಂತಹ ನಿರ್ಧಾರವೊಂದು ಮೂಡಿದ ಬಳಿಕ ಮಾಲತಿ ಮತ್ತೆ ತನ್ನ ಬದುಕಿನಲ್ಲಿ ಹಿಂತಿರುಗಿ ನೋಡಲಿಲ್ಲ. ತಾನೊಬ್ಬಳು ವಿಕಲಾಂಗಿನಿ ಎಂಬುದು ಆಕೆಗೆ ಮರೆತೇ ಹೋಯಿತು.

'ನಾನು ಚಿಕ್ಕವಳಿದ್ದಾಗ, ಮನೆಯ ಹಿಂಬದಿಯಿಂದ ಮಾವಿನ ಮರದಿಂದ ಬೀಳುವ ಹಣ್ಣುಗಳನ್ನು ಎಲ್ಲರಿಗಿಂತ ಮೊದಲು ಓಡಿಹೋಗಿ ಆರಿಸಿಕೊಳ್ಳಬೇಕೆಂಬ ತುಡಿತವಿತ್ತು. ಒಂದೆಡೆಯಿಂದ ಇನ್ನೊಂದೆಡೆಗೆ ಹಕ್ಕಿಯಂತೆ ಹಾರಬೇಕೆಂಬ ಅದಮ್ಯ ಇಚ್ಛೆಯಿತ್ತು. ಆದರೆ ನಾನು ದೊಡ್ಡವಳಾಗುತ್ತಿದ್ದಂತೆ, ಓಡಿಹೋಗಲು ಕಾಲುಗಳು ಬೇಕು. ಹಕ್ಕಿಯಂತೆ ಹಾರಲು ರೆಕ್ಕೆಗಳು ಬೇಕು ಎಂಬುದು ಅರಿವಾಯಿತು. ಆದರೇನು, ನನಗೆ ಕಾಲುಗಳೇ ಇರಲಿಲ್ಲ. ರೆಕ್ಕೆಯಂತೂ ಇಲ್ಲವೇ ಇಲ್ಲ. ಯೋಚಿಸುತ್ತಿದ್ದಂತೆ ನನ್ನ ಮನಸ್ಸಿಗಾದ ಆಘಾತ, ನೋವು ಅಷ್ಟಿಷ್ಟಲ್ಲ. ಆದರೆ ನಾನು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಒಂದು ದಿನ ನಾನು ಕೂಡ ಓಡಬಲ್ಲೆ, ಏನನ್ನಾದರೂ ಸಾಧಿಸಬಲ್ಲೆ ಎಂಬ ದೃಢ ಸಂಕಲ್ಪ ತೊಟ್ಟೆ....' – ಮಾಲತಿ ತನ್ನ ಬದುಕಿನ ದುಃಖದುಮ್ಮಾನಗಳ ಕುರಿತು ಈಚೆಗೆ ಬಿಡುಗಡೆಗೊಂಡಿರುವ 'ಎ ಡಿಫರೆಂಟ್ ಸ್ಪಿರಿಟ್' ಕೃತಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. ಹಿರಿಯ ಪತ್ರಕರ್ತ ಅನಂತಕೃಷ್ಣನ್ ರಚಿಸಿರುವ ಈ ಕೃತಿಯಲ್ಲಿ ಮಾಲತಿ ಹೊಳ್ಳ ಅವರ ಬದುಕಿನ ಕಷ್ಟ-ಸಂಕಟ, ನೋವು-ನಲಿವು, ಸಾಧನೆಗಳು ಇತ್ಯಾದಿ ಅನಾವರಣಗೊಂಡಿದ್ದು ವಿಕಲಾಂಗ ಚೇತನಗಳಿಗೆ ಇದು ಒಂದು ಭಗವದ್ಗೀತೆಯಂತಿದೆ.

ವಿಕಲಾಂಗ ಕ್ರೀಡಾಪಟುಗಳಿಗಾಗಿಯೇ ನಡೆಯುವ ಪ್ಯಾರಾ ಒಲಂಪಿಕ್‌ನಲ್ಲಿ ಆಟೋಟ, ಶಾಟ್‌ಪುಟ್ ಎಸೆತ, ಜಾವೆಲಿನ್ ಎಸೆತ.... ಹೀಗೆ ವಿವಿಧ ಬಗೆಯ ಕ್ರೀಡೆಗಳಿರುತ್ತವೆ. ಮಾಲತಿ ಹೊಳ್ಳ ಈ ಕ್ರೀಡೆಗಳಲ್ಲೂ ಪಾಲ್ಗೊಂಡು ತನ್ನ ಸಾಮರ್ಥ್ಯ ಪ್ರದರ್ಶಿಸಿದರು. ರಾಷ್ಟ್ರೀಯ ಮಟ್ಟದಲ್ಲೂ ವಿಕಲಾಂಗ ಕ್ರೀಡಾಪಟುಗಳಿಗೆ ನಡೆಯುವ ಹಲವು ಸ್ಪರ್ಧೆಗಳಲ್ಲಿ ಪಾಲ್ಗೊಂಡರು... ಒಂದು ಪ್ಯಾರಾ ಒಲಂಪಿಕ್ ಚಿನ್ನದ ಪದಕವೂ ಸೇರಿದಂತೆ ಆಕೆ ಇದುವರೆಗೆ ಗಳಿಸಿದ ಒಟ್ಟು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪದಕಗಳ ಸಂಖ್ಯೆ ಬರೋಬ್ಬರಿ 300! ಶರೀರ ದುರ್ಬಲವಾಗಿದ್ದರೇನು, ಮನಸ್ಸು ದೃಢವಾಗಿದ್ದರೆ, ಹಠವೊಂದಿದ್ದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಮಾಲತಿ ಹೊಳ್ಳ ಒಂದು ದಿವ್ಯ ನಿದರ್ಶನ.



ಇಷ್ಟೆಲ್ಲ ಸಾಧನೆ ಮಾಡಿರುವ ಮಾಲತಿ ಹೊಳ್ಳ ಕ್ರೀಡಾಪಟು ಅಷ್ಟೇ ಅಲ್ಲ. ಆಕೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿಯೂ ಉದ್ಯೋಗ ನಿರ್ವಹಿಸುತ್ತಿದ್ದಾರೆ. ಅಷ್ಟೇ ಅಲ್ಲ. ತನ್ನಂತೆಯೇ ವಿಕಲಾಂಗರಾಗಿರುವ 16 ಮಂದಿ ಗ್ರಾಮೀಣ ಪ್ರದೇಶದ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ 'ಮಾತೃ ಪ್ರತಿಷ್ಠಾನ' ಎಂಬ ಸಂಸ್ಥೆಯನ್ನು ನಿರ್ವಹಿಸುತ್ತಿದ್ದಾರೆ. ತನ್ನ ಸ್ನೇಹಿತರೊಂದಿಗೆ ಸೇರಿ ಮಾಲತಿಯೇ ಈ ವಿಕಲಾಂಗ ಮಕ್ಕಳ ಬದುಕಿನಲ್ಲಿ ಸ್ಫೂರ್ತಿ, ಉತ್ಸಾಹ ತುಂಬಿ, ವಿದ್ಯಾಭ್ಯಾಸ ನೀಡಿ ಅವರನ್ನು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡುವುದು ಮಾತೃ ಪ್ರತಿಷ್ಠಾನದ ಗುರಿ.

ಬೆಂಗಳೂರಿನಲ್ಲಿ ಈಚೆಗೆ ಬಿಡುಗಡೆಗೊಂಡ ಮಾಲತಿಹೊಳ್ಳ ಕುರಿತ 'ಎ ಡಿಫರೆಂಟ್ ಸ್ಪಿರಿಟ್' ಕೃತಿಯ ಮಾರಾಟದಿಂದ ಬಂದ ಮೊತ್ತವನ್ನು ಮಾತೃ ಪ್ರತಿಷ್ಠಾನದ ನಿರ್ವಹಣೆಗೆ ಬಳಸಲಾಗುತ್ತದೆ. ಈ ಕೃತಿಯ ಬೆಲೆ 200 ರೂ. ಅಂದಹಾಗೆ ಈ ಪುಸ್ತಕ ನಿಮಗೆ ಪುಸ್ತಕದಂಗಡಿಗಳಲ್ಲಿ ಸುಲಭವಾಗಿ ದೊರೆಯುವುದಿಲ್ಲ. ಈ ಕೃತಿಯನ್ನು ಓದಲೇಬೇಕೆಂಬ ಬಯಕೆ ನಿಮಗಿದ್ದರೆ ವೆಬ್‌ಸೈಟ್ ಮೂಲಕವೇ (www.adifferentspirit.com) ಆರ್ಡರ್ ಮಾಡಿ ತರಿಸಿಕೊಳ್ಳಬೇಕು. ಇದನ್ನು ಪ್ರಕಟಿಸಿದವರು Inspired Indian ಎಂಬ ಪ್ರಕಾಶನ ಸಂಸ್ಥೆ.

'ನನ್ನ ಬದುಕಿನಲ್ಲಿ ನಡೆಸಿದ ಹೋರಾಟಗಳು ನನ್ನಂತೆಯೇ ವಿಕಲಾಂಗರಾಗಿರುವ ಮಂದಿಗೆ ಪ್ರೇರಣೆ ನೀಡಿದರೆ ಈ ಕೃತಿಯ ಪ್ರಕಟಣೆ ಸಾರ್ಥಕವಾದೀತು' – ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಮಾಲತಿ ಹೊಳ್ಳ ಅವರ ಮನದಾಳದಿಂದ ಹೊರಹೊಮ್ಮಿದ ಮಾತಿದು. ಮಾಲತಿ ಹೊಳ್ಳ ಅವರ ಬದುಕು, ಹೋರಾಟ, ಸಾಧನೆ ವಿಕಲಾಂಗರಿಗಷ್ಟೇ ಅಲ್ಲ, ವಿಕಲಾಂಗರಲ್ಲದವರಿಗೂ ಸ್ಫೂರ್ತಿ, ಪ್ರೇರಣೆ ನೀಡುವುದರಲ್ಲಿ ಅನುಮಾನವೇ ಇಲ್ಲ.

**ಕೃಪೆ : ವಿಕ್ರಮ, ವಾರಪತ್ರಿಕೆ**



# ನೀವೂ ಓದಿ

## ಮರೆಯಲಾದೀತೆ?

**ಅವರು ಬಿಳಿ ಬಟ್ಟೆಯ ಸಂನ್ಯಾಸಿ!**

ಅವರು ಹುಟ್ಟಿದ್ದು 1918ರಲ್ಲಿ. ಓದಿದ್ದು ಬೆಂಗಳೂರು, ಮೈಸೂರುಗಳಲ್ಲಿ, ಮೊದಲು ಕೆಲಸಮಾಡಿದ್ದು ಹೆಚ್.ಎ.ಎಲ್.ನಲ್ಲಿ ಕಾರ್ಮಿಕರಾಗಿ. ಅನಂತರ ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಉಪಾಧ್ಯಾಯರಾಗಿ ದುಡಿದರು. ತಾವು ಹೋದಲ್ಲೆಲ್ಲ ಜನಮೆಚ್ಚುಗೆ ಗಳಿಸಿದರು. ಆ ಹಳ್ಳಿಗಳಲ್ಲಿ ಜನರ ಸಹಾಯ ಸಹಭಾಗಿತ್ವದಲ್ಲಿಯೇ ಶಾಲಾಕಟ್ಟಡಗಳನ್ನು ಕಟ್ಟಿದರು, ರಸ್ತೆಗಳನ್ನು ನಿರ್ಮಿಸಿದರು, ರಂಗಮಂದಿರ, ಶಿವಾಲಯಗಳನ್ನು ಕಟ್ಟಿ ನಿಲ್ಲಿಸಿದರು. ತಮ್ಮ ಊರಿನಲ್ಲಿ ಶಾಲೆಗಳನ್ನು ನಡೆಸಿದರು, ಈಗಲೂ ನಡೆಸುತ್ತಿದ್ದಾರೆ. ಹೋದಲೆಲ್ಲ ಸಾಹಿತ್ಯಸುಧೆಯನ್ನು ಹಂಚಿದರು. ಹೆಸರಾಂತ ಸಾಹಿತಿಗಳನ್ನು ಕರೆಸಿ ಕಾರ್ಯಕ್ರಮಗಳನ್ನು ಮಾಡಿದರು. ತಾವಿದ್ದ ಊರಿನ ಜನಸಾಮಾನ್ಯರಿಂದ ಹಿಡಿದು, ನಾಡಿನ ಹಿರಿಯ ಸಾಹಿತಿಗಳು, ಕಲಾವಿದರೊಂದಿಗೆ ಒಡನಾಡಿದವರು. ಗಾಂಧೀಜಿಯವರೊಡನೆಯೂ ಸಂಪರ್ಕದಲ್ಲಿದ್ದ ಅವರ ಅನುಭವ ವಿಸ್ತಾರ ಎಂಥದ್ದಿರಬಹುದು?

ಹೆಚ್.ಎ.ಎಲ್.ನ ಕಾರ್ಮಿಕ ಕೆಲಸಬಿಟ್ಟು ಮಾಸ್ತರಿಕೆಯನ್ನಾಯ್ದುಕೊಂಡು ಹೆಗ್ಗರೆಯಲ್ಲಿದ್ದಾಗ ಅವರಿಗೊಂದು ಗಂಡುಮಗುವಿತ್ತು. ಪತ್ನಿ ಪದ್ಮಾ ಗರ್ಭಿಣಿ. ಇದ್ದಕ್ಕಿದ್ದಂತೆ ಅದೊಂದು ದಿನ ಅಂಗಳದಲ್ಲಿ ಆಟವಾಡುತ್ತಲೇ ತೀರಿಕೊಂಡ ಮಗು; ಆಘಾತ ತಡೆಯಲಾರದೇ ಶಿವನ ಪಾದ ಸೇರಿದ ಹೆಂಡತಿ; ಸತ್ತುಹುಟ್ಟಿದ ಭ್ರೂಣ ಮುಪ್ಪರಿಗೊಂಡ ದುಃಖ, ಸಂಕಟ ತಾಳಲಾರದೇ, ಇದ್ದ ಮನೆಗೊಂದು ಬೀಗವನ್ನೂ ಹಾಕದೇ ಹೊರಟುಬಿಟ್ಟರು. ಎಲ್ಲಿಗೆ? ಗೊತ್ತಿಲ್ಲ!

ಹಿಮಾಲಯ ಕೈಬೀಸಿಕರೆದಿತ್ತು. ಅಲ್ಲೆಲ್ಲ ಓಡಾಡಿ, ಒಡಲುರಿಯ ವೇದನೆ ಸ್ವಲ್ಪಮಟ್ಟಿಗೆ ತಣಿದು, ಹಿಂದಿರುಗುವಾಗ ಸಿಕ್ಕರು ಗಾಂಧಿ. ಸ್ವಲ್ಪ ದಿನ ರಮಣರ ಸಾನ್ನಿಧ್ಯವೂ ಸಿಕ್ಕಿತ್ತು. ಕೊನೆಗೆ ಗಾಂಧೀಜಿಯವರ ಸಲಹೆಯಂತೆ ಊರಿಗೆ ಮರಳಿದರು. ಅದೇ ಶಾಲೆಯ ಮಾಸ್ತರಿಕೆ ಅವರಿಗಾಗಿ ಕಾಯುತ್ತಿತ್ತು!

ತಿರುಗಿ ಊರಿಗೆ ಬಂದಮೇಲೆ, ಮರುಮದುವೆಗೆ ಅಕ್ಕನ ಒತ್ತಾಯ ಹೆಚ್ಚಿದಾಗ ತಮ್ಮ ಹಲ್ಲುಗಳನ್ನು ತಾವೇ ಮುರಿದುಕೊಂಡು ಬೊಚ್ಚುಬಾಯಿ ಪ್ರದರ್ಶಿಸಿದರು! ಅಂದಿನಿಂದಲೂ ಜನಸೇವೆಯಲ್ಲೇ ಜನಾರ್ದನನನ್ನು ಸಾಕ್ಷಾತ್ಕರಿಸಿಕೊಂಡು, ಹಳ್ಳಿಗರ ಬದುಕಿನಲ್ಲಿ ಭರವಸೆ ಮೂಡಿಸಿದರು. ಇಂಥವರ ಅನುಭವ ಬರಹರೂಪಕ್ಕಿಳಿದರೆ...?

ನಿಜ, ಅದೊಂದು ಸ್ಫೂರ್ತಿದಾಯಕ ಕಥನ. ಆಗಲೇ ಹೇಳಿದಂತೆ, ಗೋಕಾಕದ ಪಾರವ್ವ, ಮಹಮ್ಮದ್ ಹಯಾತ್‌ಸಾಬ್, ಸಿದ್ದಯ್ಯ ಮೇಷ್ಟ್ರು, ಕಂಡಕ್ಟರ್ ತಿಮ್ಮಯ್ಯರಿಂದ ಹಿಡಿದು, ನಿಟ್ಟೂರು ಶ್ರೀನಿವಾಸರಾಯರು, ಶಿವರಾಮಕಾರಂತರು, ಡಿವಿಜಿ ಸೇರಿದಂತೆ ಮಹಾತ್ಮಗಾಂಧಿ, ಜಿಡ್ಡು ಕೃಷ್ಣಮೂರ್ತಿ, ರಮಣಮಹರ್ಷಿ – ಹೀಗೆ ಹಳ್ಳಿಯಿಂದ ದಿಲ್ಲಿಯವರೆಗಿನ ಹಲವು ಸ್ತರದ, ಹಲವು ವೃತ್ತಿಯ ವ್ಯಕ್ತಿಗಳೊಂದಿಗಿನ ಒಡನಾಟದ ಕಥನ ಅದು. ಅಲ್ಲಿರುವುದು, ಬದುಕಿನ ವಿವಿಧ ಮುಖಗಳನ್ನು, ಹಲವು ಹಂತಗಳಲ್ಲಿ ನಿಂತು ಅವಲೋಕಿಸಿದಾಗ ದೊರೆತ ಅನುಭವಗಳು. ಪ್ರತಿಯೊಂದು ನಿರೂಪಣೆಯೂ ನಮ್ಮ ಬದುಕಿನ ಯಾವುದೋ ಒಂದು ಸಂದರ್ಭದೊಂದಿಗೆ, ಸನ್ನಿವೇಶದೊಂದಿಗೆ ಸಂಬಂಧ ಕುದುರಿಸಿಕೊಂಡು ಸಾಂತ್ವನ ನೀಡುತ್ತದೆ, ಸ್ಫೂರ್ತಿ ತುಂಬುತ್ತದೆ, ಬೆಳಕು ತೋರಿಸುತ್ತದೆ, ಭರವಸೆ ಮೂಡಿಸುತ್ತದೆ. ಸುಮಾರು ನಾನ್ನೂರೈವತ್ತು ಪುಟದ ಆ ಹೊತ್ತಗೆಯನ್ನು ಓದಿ ಮುಗಿಸುವ ಹೊತ್ತಿಗೆ ಮಧ್ಯದಲ್ಲೆಲ್ಲೋ ತೇವಗೊಂಡಿದ್ದ ಕಣ್ಣಂಚಿನಲ್ಲಿ ಭರವಸೆ ಪ್ರತಿಫಲಿಸುತ್ತಿರುತ್ತದೆ. ಆರ್ದ್ರಗೊಂಡು ಭಾರವಾಗಿದ್ದ ಹೃದಯ ಉಲ್ಲಸಿತಗೊಳ್ಳುತ್ತದೆ.

ವಿಶೇಷವೆಂದರೆ, ಅದು, ಯಾರೂ–ಯಾವುದೂ ತನ್ನದೆಲ್ಲವೆಂದುಕೊಂಡ ಕ್ಷಣದಲ್ಲಿಯೇ ಸಕಲರನ್ನೂ–ಸಕಲವನ್ನೂ ತನ್ನವರನ್ನಾಗಿಸಿಕೊಂಡು ಬದುಕಿದ, ಬದುಕುತ್ತಿರುವ ಹಿರಿಯಜೀವದ ನೆನಪುಗಳ ಸಂಗ್ರಹ. ಕಳೆದ ಆರೆಂಟು ದಶಕಗಳಲ್ಲಿ ಬದುಕಿನಲ್ಲಿ ಬಂದುಹೋದವರ – ಮರೆಯಲಾಗದ – ಮಧುರ ಸ್ಮೃತಿಗಳ ಮೆಲುಕು. ನಮ್ಮ ಬದುಕಿಗೆ, ಬದುಕಿನ ಉದ್ದೇಶಕ್ಕೆ, ಕಾರ್ಯಕ್ಕೆ ದಾರಿತೋರಬಲ್ಲ, ದೃಢತೆ ನೀಡಬಲ್ಲ ಸಾಹಿತ್ಯ. ಆ ಕೃತಿಯೇ 'ಮರೆಯಲಾದೀತೆ?' ಬೆಳಗೆರೆ ಕೃಷ್ಣಶಾಸ್ತ್ರಿಗಳ ಈ ಪುಸ್ತಕವನ್ನು ಓದಿ ಮುಗಿಸಿದ ನಂತರ ನಮಗನಿಸುವುದೂ ಇಷ್ಟೆ. ''ಈ ಪುಸ್ತಕವನ್ನು, ಅದರಲ್ಲಿನ ವಿಷಯವಸ್ತುಗಳನ್ನು ಮರೆಯಲಾದೀತೆ?''

| | | | |
|---|---|---|---|
| **ಪುಸ್ತಕದ ಹೆಸರು :** | **ಮರೆಯಲಾದೀತೆ?** | **ಲೇಖಕರು** | **: ಬೆಳಗೆರೆ ಕೃಷ್ಣಶಾಸ್ತ್ರಿ** |
| **ಪ್ರಕಾಶಕರು** | **: ಅಭಿನವ ಪ್ರಕಾಶನ** | **ಪ್ರಕಟಣೆಯ ವರ್ಷ** | **: 2008** |
| | | **ಬೆಲೆ** | **: 250 ರೂ.** |

**ಕ್ರೀಡಾಭಾರತಿಯ ಮಹಾರಾಷ್ಟ್ರ ಘಟಕ ಅತ್ಯುತ್ತಮ ಕ್ರೀಡಾಪಟುವನ್ನು ರೂಪಿಸಿದ ತಾಯಿಯನ್ನು ಗುರುತಿಸಿ ಅವರಿಗೆ ಜೀಜಾಬಾಯಿ ಪುರಸ್ಕಾರವನ್ನು ನೀಡುತ್ತಿದೆ.**

# ಗಣೇಶ ಚತುರ್ಥಿ

ಪುಟ 5ರಿಂದ

**ಸಾಮಾಜಿಕ ಮಹತ್ವ :** ಭಾರತದಲ್ಲಿ ಗಣೇಶನ ಗುಡಿಯಿಲ್ಲದ ಗ್ರಾಮವಿಲ್ಲ, ಗಣೇಶನ ವಿಗ್ರಹವಿಲ್ಲದ ಗೃಹವಿಲ್ಲ. ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತ ಕಾಲದಲ್ಲಿ ಗಣಪತಿ ಉತ್ಸವ ಹಿಂದುಗಳ ಮಹಾ ಉತ್ಸವವಾಗಿ ವಿಜೃಂಭಿಸುತ್ತಿತ್ತು. ಮುಂದೆ ಲೋಕಮಾನ್ಯ ಬಾಲಗಂಗಾಧರ ತಿಲಕರವರು ರಾಷ್ಟ್ರೀಯ ಸಂಘಟನೆಗಾಗಿ ಗಣಪತಿ ಹಬ್ಬವನ್ನು ಬಳಸಿಕೊಂಡು, ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೆ ತಂದರು. ಗಣಪತಿ ಹಬ್ಬಕ್ಕೆ ಸಾರ್ವತ್ರಿಕ ಸಮಾರಂಭದ ರೂಪ ಕೊಟ್ಟು, ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪಿಸಿದ ಗಣಪತಿ ಸನ್ನಿಧಿಯಲ್ಲಿ ಹತ್ತು ಹಲವು ದಿನಗಳ ಕಾಲ ಉಪನ್ಯಾಸ, ಸಂಗೀತ, ನೃತ್ಯ–ನಾಟಕ, ಹರಿಕಥೆ ಮುಂತಾದವುಗಳು ಜರುಗುವಂತೆ ಮಾಡಿ ಆ ಮೂಲಕ ರಾಷ್ಟ್ರಪ್ರಜ್ಞೆ ಜಾಗೃತಿಗೊಳಿಸಿದರು. ಸ್ವಾಮಿ ವಿವೇಕಾನಂದರೂ ಇದೇ ರೀತಿ ಬಂಗಾಳದಲ್ಲಿ ಹಿಂದೂ ಸಮಾಜ ಸಂಘಟನೆಗೆ ಗಣಪತಿ ಉತ್ಸವವನ್ನು ಬಳಸಿಕೊಂಡರು, ಹೀಗೆ ಗಣಪ ವಿಘ್ನನಿವಾರಕನಷ್ಟೇ ಅಲ್ಲ ಸಮಾಜ ಸಂಘಟನೆಯ ಮೂಲ ಪುರುಷನೂ ಹೌದು. ಆದ್ದರಿಂದಲೇ ಎಲ್ಲಾ ಪೂಜೆಗಳ, ಶುಭ ಕಾರ್ಯಗಳ ಪ್ರಾರಂಭದಲ್ಲಿ ಗಣಪತಿಗೆ ಪ್ರಥಮ ಪೂಜೆ ಸಲ್ಲುತ್ತದೆ.

**ವಿಶ್ವವ್ಯಾಪಿ ಗಣಪತಿ :** ಹಿಂದೂಗಳಷ್ಟೇ ಅಲ್ಲ ಬೌದ್ಧ–ಜೈನರೂ ಗಣಪತಿಯನ್ನು ಆರಾಧಿಸುತ್ತಾರೆ. ಅಶೋಕನ ಮಗಳು ಚಾರುಮತಿ ನೇಪಾಳದಲ್ಲಿ ಗಣೇಶ ದೇವಾಲಯ ಕಟ್ಟಿಸಿದಳೆಂದು ದಂತ ಕಥೆ ಇದೆ. ಟಿಬೇಟಿನ ಬೌದ್ಧರು ಗಣೇಶನನ್ನು ಸ್ತ್ರೀರೂಪದಲ್ಲಿ ನಿರೂಪಿಸಿದ್ದಾರೆ. ಸಿಂಹಳದ 'ಕಟರ್' ಗ್ರಾಮದಲ್ಲಿ ಇರುವ ಗಣಪತಿಯನ್ನು ಮುಸಲ್ಮಾನರೂ ಕ್ರಿಶ್ಚಿಯನ್ನರೂ ಪೂಜಿಸುತ್ತಾರೆ. 'ಗಣೇಶ ಹೃದಯ' ಎಂಬ ಸ್ತೋತ್ರ ನೇಪಾಳ ಚೀನಾ, ಟಿಬೇಟ್, ಜಪಾನ್‌ಗಳಲ್ಲಿ ಪ್ರಚಲಿತವಾಗಿದೆ. ಆಫ್ಘಾನಿಸ್ಥಾನ, ಇಂಡೋನೇಶಿಯಾ ಕಾಂಬೋಡಿಯಾ, ಥೈಲ್ಯಾಂಡ್, ಮಲಯ ಮುಂತಾದ 14 ದೇಶಗಳಲ್ಲಿ 32 ವಿಧವಾದ ಗಣಪತಿಯ ಚಿತ್ರ–ವಿಚಿತ್ರ ಮೂರ್ತಿಗಳು ದೇವಾಲಯಗಳು ಕಂಡುಬರುತ್ತವೆ. ಜರ್ಮನಿಯಲ್ಲಿ ಗಣಪತಿ ದೇವಾಲಯಗಳು ಕಂಡು ಬರುತ್ತವೆ. ನ್ಯೂಯಾರ್ಕ್‌ನಲ್ಲಿ ಬಲಮುರಿ ಗಣೇಶನ ಪೂಜೆ, ಲಾವೋಸ್‌ನಲ್ಲಿ ಹೊರಡಿಸಿದ ಗಣೇಶನ ಸ್ಟಾಂಪ್ ಅವನ ವಿಶ್ವಖ್ಯಾತಿಗೆ ಹಿಡಿದ ಕನ್ನಡಿಯಾಗಿದೆ. ಚೀನಾದಲ್ಲಿ ಕ್ರಿ.ಶ. 531ರಲ್ಲಿ ಗಣೇಶನಿಗೆ ಸಂಬಂಧಿಸಿದ ಪ್ರಾಚೀನ ಶಾಸನ ದೊರೆತಿದೆ.

ಮಾತೆಯ ಭಕ್ತಿಗಾಗಿ ತನ್ನ ತಲೆಯನ್ನೇ ಮುಡಿಪಾಗಿಟ್ಟ ಬಾಲಗಣಪ, ಮೂರು ಲೋಕವನ್ನು ಸುತ್ತು ಎಂದರೆ ತಂದೆತಾಯಿಯರನ್ನೇ ಪ್ರದಕ್ಷಿಣೆ ಮಾಡಿ ಮೂರೂ ಲೋಕವನ್ನು ತನ್ನ ತಂದೆ ತಾಯಿಯರರಲ್ಲೇ ಕಂಡ. ತನ್ನ ಆಕಾರವನ್ನು ಲೇವಡಿ ಮಾಡಿದ ಚಂದ್ರನಿಗೆ ಶಾಪಕೊಟ್ಟು, ಆಕಾರಕ್ಕಿಂತ ವಿದ್ಯೆ, ಬುದ್ಧಿ, ಸದಾಚಾರ, ಜ್ಞಾನಶೀಲರಾಗುವುದು ಮುಖ್ಯವೆಂದು ಸಾರಿದ ವಿಘ್ನವಿನಾಯಕ ಪ್ರತೀವರ್ಷ ಮನೆ ಮನೆಗಳಿಗೂ ಬಂದು ನಮ್ಮನ್ನೆಲ್ಲಾ ಆಶೀರ್ವದಿಸಲಿ. ●

## ಆರೋಗ್ಯ ಸೂತ್ರ

- ಊಟದ ಸಮಯದಲ್ಲಿ ಸೌತೆಕಾಯಿ, ಗಜ್ಜರಿ, ಮೂಲಂಗಿ, ಸೀಬೆಕಾಯಿ, ಟೊಮ್ಯಾಟೋ, ಬೋರೆ, ನೇರಳೆ, ಮಾವು, ಬಾಳೆ, ಪಪ್ಪಾಯಿ, ಕಿತ್ತಳೆ, ಮೂಸಂಬಿ – ಇಂತಹ ರಸಭರಿತ ಹಣ್ಣುಗಳನ್ನು ತಿನ್ನುವುದರಿಂದ ಹೊಟ್ಟೆಯ ಆರೋಗ್ಯ ಚೆನ್ನಾಗಿರುತ್ತದೆ.
- ಊಟಕ್ಕೆ ಅರ್ಧ ಗಂಟೆ ಮೊದಲು ಮತ್ತು ಅರ್ಧ ಗಂಟೆ ನಂತರ ಒಂದು ಲೋಟ ನೀರನ್ನು ಕುಡಿಯಬೇಕು.
- ನಿಂತು, ಮಲಗಿ ಅಥವಾ ಓಡಿ ಬಂದಾಕ್ಷಣ ನೀರನ್ನು ಕುಡಿಯಬಾರದು.

## ಅಮೃತ ಬಿಂದು

**ದೇವದಾನವರ ರಣರಂಗ ಮಾನವ ಹೃದಯ**
**ಭಾವ ರಾಗ ಹಠಂಗಳವರ ಸೇನೆಗಳು ।**
**ಭುವಿಭವಜಯಗಳ ಭ್ರಾಂತಿಯಲಿ ಮರೆಯುವರು**
**ಜೀವಾಮೃತವನವರು ಮಂಕುತಿಮ್ಮ ॥**

ಮಾನವರ ಒಳಗೆ ಯಾವಾಗಲೂ ದೇವತೆಗಳಿಗೂ ರಾಕ್ಷಸರಿಗೂ ಯುದ್ಧ ನಡೆಯುತ್ತಲೇ ಇರುತ್ತದೆ. ಅಂದರೆ, ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ವಿಚಾರಗಳ ನಡುವೆ. ಭಾವ, ರಾಗ ಮತ್ತು ಹಠಗಳೇ ಅವರ ಸೈನ್ಯಗಳು. ಯಶಸ್ಸು ಕೀರ್ತಿ ಎಂಬ ಭ್ರಾಂತಿಯಲ್ಲಿ ಮನುಷ್ಯರು ಜೀವನದ ಮುಖ್ಯ ಉದ್ದೇಶಗಳನ್ನೇ ಮರೆತು ಬಿಡುತ್ತಾರೆ.

## ವದತ ಸಂಸ್ಕೃತಮ್

**ಪುತ್ರಃ : ಅಂಬಾ, ಪಶ್ಯತು ಅಂಧಕಾರಃ ಅಭವತ್।**
**(ಅಮ್ಮಾ, ನೋಡು ಕತ್ತಲೆ ಆಯ್ತು)**

**ಮಾತಾ : ನಾಸ್ತಿ ಮನು, ಇದಾನೀಂ ವೃಷ್ಟಿಃ ಆಗಚ್ಛತಿ।**
**(ಇಲ್ಲಾ, ಮನು ಈಗ ಮಳೆ ಬರುತ್ತೆ)**

**ಪುತ್ರಃ : ಕಥಂ ಜ್ಞಾಯತೇ?**
**(ಹೇಗೆ ಗೊತ್ತಾಗುತ್ತೆ?)**

**ಮಾತಾ : ಪಶ್ಯತು, ಆಕಾಶಃ ಕೃಷ್ಣವರ್ಣಃ ಜಾತಃ। ಯದಾ ಆಕಾಶಃ ಕೃಷ್ಣವರ್ಣಃ ಭವತಿ ತದಾ ವೃಷ್ಟಿಃ ಆಗಚ್ಛತಿ।**
**(ನೋಡು, ಆಕಾಶ ಕಪ್ಪಾಗಿದೆ. ಯಾವಾಗ ಆಕಾಶ ಕಪ್ಪಾಗುತ್ತೋ ಆಗ ಮಳೆ ಬರುತ್ತೆ)**

**ಪುತ್ರಃ : ಸತ್ಯಂ ಅಂಬಾ ವೃಷ್ಟಿಃ ಆಗತಾ।**
**(ಹೌದಮ್ಮಾ, ಮಳೆ ಬಂತು)**

**ಮಾತಾ : ಅಸ್ತು, ಅಂತಃ ಆಗಚ್ಛತು।**
**(ಸರಿ, ಒಳಗೆ ಬಾ)**

ನಿಮ್ಮೂರಿನ ಸೇವಾ ಚಟುವಟಿಕೆಗಳ ಸುದ್ದಿ ಮತ್ತು ಪ್ರೇರಣಾದಾಯಿ ಸಂಗತಿಗಳನ್ನು ಹೊತ್ತು ತರುತ್ತಿರುವ ಸೇವಾದಿಶಾ ಕ್ಕೆ ಓದುಗರೇ ಪೋಷಕರು. ನಿಮ್ಮ ಚಂದಾ ಅವಧಿ ಮುಗಿದಿದ್ದಲ್ಲಿ ನವೀಕರಿಸಲು ನಮ್ಮ ವಿಳಾಸಕ್ಕೆ ಬರೆಯಿರಿ.

''ಸೇವಾದಿಶಾ''ವನ್ನು ಇನ್ನೂ ಹೆಚ್ಚಿನ ಜನರಿಗೆ ತಲುಪಿಸಲು ನಿಮ್ಮ ಪರಿಚಯದವರನ್ನು ಚಂದಾದಾರರನ್ನಾಗಿಸಿ

ಅಂಚೆ ವೆಚ್ಚ ಸೇರಿ : ವಾರ್ಷಿಕ ಚಂದಾ ರೂ. 50/-
ಪೋಷಕ ಸದಸ್ಯರು : ರೂ. 500/-
(5 ವರ್ಷಗಳ ಕಾಲ ಪತ್ರಿಕೆಯನ್ನು ಕಳಿಸಲಾಗುವುದು)

**ಚಂದಾ ಹಣ ನೀಡಿ, ಪತ್ರಿಕೆ ಪ್ರಸಾರಕ್ಕೆ ಬೆಂಬಲ ನೀಡಿ.**

## ಹೆಜ್ಜೆ ಗುರುತು

# ಒಡೆದ ಸಂಸಾರ ಸೇರಿತು

ನಾನು ಮುದ್ದೇಬಿಹಾಳದ ಶಿಶುಮಂದಿರಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಮಗುವನ್ನು, ಆ ಮಗುವಿನ ತಂದೆಯೇ ಶಾಲೆಗೆ ಬಿಟ್ಟುಹೋಗುತ್ತಿದ್ದರು.

ಒಮ್ಮೆ ಮಾತೃಮಂಡಳಿಗೆ ಆ ಮಗುವಿನ ತಾಯಿಯನ್ನು ಕರೆಯಲು ಹೋದಾಗ ಮಗುವಿನ ತಾಯಿ ತವರಿಗೆ ಹೋಗಿದ್ದಾಳೆ ಎಂದು ತಿಳಿಯಿತು. ಮತ್ತೆರಡು ಮೂರು ಬಾರಿ ಕೇಳಿದಾಗಲೂ ಇದೇ ಉತ್ತರ ಬಂದಾಗ ಅಕ್ಕ-ಪಕ್ಕದವರು ಪತಿ-ಪತ್ನಿಯರಲ್ಲಿ ಹೊಂದಾಣಿಕೆಯಿಲ್ಲ. ಈತ ಕುಡಿದು ಬಂದು, ಚೆನ್ನಾಗಿ ಹೆಂಡತಿಯನ್ನು ಹೊಡೆದು ತವರಿಗೆ ಅಟ್ಟಿದ್ದಾನೆ. ಮಗನ ಮೇಲಿನ ಆಸೆಯಿಂದ ಮಗನನ್ನು ಮಾತ್ರ ತನ್ನ ಬಳಿ ಇರಿಸಿಕೊಂಡಿದ್ದಾನೆ ಎಂಬ ನಿಜಾಂಶ ಬಯಲಾಯಿತು. ನಂತರ ನಿಧಾನವಾಗಿ ಆತನನ್ನು ತಿದ್ದಲು ಪ್ರಯತ್ನಿಸುತ್ತಾ ಹೋದೆ. ಶಾಲೆಗೆ ಮಗುವನ್ನು ಬಿಡಲು ಬಂದಾಗ, ಕುಡಿದು ಶಾಲೆಗೆ ಬಂದರೆ ಮಗುವನ್ನು ಸೇರಿಸುವುದಿಲ್ಲ, ನಿಮ್ಮ ಮಗುವನ್ನು ವಾಪಸ್ಸು ಕರೆದುಕೊಂಡು ಹೋಗಿ, ನಿಮ್ಮ ಹೆಂಡತಿ ಮಾತೃಮಂಡಳಿಗೆ ಬರದಿದ್ದರೆ, ನಿಮ್ಮ ಮಗು ನಮ್ಮ ಶಾಲೆಗೆ ಬರುವುದು ಬೇಡ ಎಂದು ಪದೇ ಪದೇ ಹೇಳತೊಡಗಿದೆ, ಆತ ಕ್ರಮೇಣ ಕುಡಿಯುವುದನ್ನು ಬಿಡುತ್ತಾ ಬಂದ. ನಂತರ ಹೆಂಡತಿಯನ್ನೂ ಸಹ ತವರಿನಿಂದ ಕರೆತಂದ. ಆ ನಂತರ ಅವರ ಸಂಸಾರ ಸುಂದರ ಸುಂದರವಾಯಿತು. ಇಂದಿಗೂ ಅವರಿಬ್ಬರಿಂದ ಆಗಾಗ ಪತ್ರ ಬರುತ್ತದೆ. ಇದು ಸೇವಾವ್ರತಿ ಜೀವನದ ಸಾರ್ಥಕತೆಯ ಮರೆಯಲಾರದ ನೆನಪು.

**ಭಗಿನಿ ರೇಣುಕ,** ತಾರೇಹಳ್ಳಿ
ಪೂರ್ವ ಸೇವಾವ್ರತಿ

# ದಿಲ್ಲಿಗೂ ತಲುಪಿದ ಪ್ರಸನ್ನ ಆಪ್ತಸಲಹಾ ಕೇಂದ್ರ

ಜುಲೈ 30, 31 ಮತ್ತು ಆಗಸ್ಟ್ 1,2 ಈ ನಾಲ್ಕು ದಿನಗಳ ಕಾಲ ಪ್ರಸನ್ನ ಆಪ್ತಸಲಹಾ ಕೇಂದ್ರದ ದಿಲ್ಲಿ ಶಾಖೆಯ ವತಿಯಿಂದ ದಿಲ್ಲಿಯಲ್ಲಿ ನಾಲ್ಕು ದಿನಗಳ ಕಾಲ ಆಪ್ತಸಲಹಾಗಾರರಿಗೆ ಪ್ರಶಿಕ್ಷಣ ವರ್ಗವನ್ನು ಆಯೋಜಿಸವಾಗಿತ್ತು.

ಪ್ರಸನ್ನ ಆಪ್ತಸಲಹಾ ಕೇಂದ್ರದ ಸಂಯೋಜಕಿಯಾದ ಶ್ರೀಮತಿ ಪಂಕಜಕ್ಕ ಮತ್ತು ಹಿರಿಯ ಆಪ್ತಸಲಹಾಗಾರರಾದ ಶ್ರೀ ದಿಲೀಪ್ ಡಿ. ಪಟೇಲ್ ನಾಲ್ಕು ದಿನಗಳು ಪೂರ್ತಿ ಪ್ರಶಿಕ್ಷಣ ವರ್ಗದಲ್ಲಿದ್ದು ಶಿಕ್ಷಾರ್ಥಿಗಳಿಗೆ ತಿಳುವಳಿಕೆ ನೀಡಿದ್ದಾರೆ. ದಿಲ್ಲಿಯ ಪ್ರತಿಷ್ಠಿತ ಮನಶಾಸ್ತ್ರಜ್ಞರು ಮತ್ತು ವೈದ್ಯರುಗಳು ತಮ್ಮ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ದಿಲ್ಲಿಯ ಸೇವಾಭಾರತಿಯ ಸಹಯೋಗದೊಂದಿಗೆ ಪ್ರಸನ್ನ ಆಪ್ತಸಲಹಾ ಕೇಂದ್ರವು ಈ ಪ್ರಶಿಕ್ಷಣ ವರ್ಗವನ್ನು ನಡೆಸಿದೆ.

ಈ ಪ್ರಶಿಕ್ಷಣ ವರ್ಗದಲ್ಲಿ 50ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಬೆಂಗಳೂರಿನಿಂದ ಶಿಕ್ಷಣ ಕೊಟ್ಟಿರುವುದೇ ಈ ವರ್ಗದ ವಿಶೇಷ. ಇಂತಹ ಪ್ರಶಿಕ್ಷಣಗಳು ಹಳ್ಳಿಯಿಂದ ದಿಲ್ಲಿಯವರೆಗೆ ಮತ್ತು ಸಮಾಜದ ಎಲ್ಲ ಸ್ತರದವರಿಗೂ ಅವಶ್ಯಕತೆ ಇದೆ.

**Postal Registration No.**
**KA/RNP/BGS/2041/2008-2010**
**RNI No. KAR KAN /2005/22027**
Office of Posting : Basavanagudi
H.P.O.,BG-4. 15th of every month

**SEWA DISHA**
**ಸೇವಾ ದಿಶಾ**
**ಆಗಸ್ಟ್ - 2009**

**ಇವರಿಗೆ,**

Printed, Published, Owned by **K S Nagabhushan** and Printed at **Rashtrotthana Mudranalaya**, K. G. Nagar, Bangalore - 560 019 and Published at **Ajitasri,** 8/28, Basavanagudi Road, Bangalore - 560 004. Editor : **Radhakrishna Holla S L** **Website :** www.hinduseva.org